27 December 2025 Saturday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 62 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ನಮ್ಮ ನೈತಿಕತೆಯ ಮಟ್ಟ ಎಷ್ಟು ಹೆಚ್ಚಾಗಿರುತ್ತದೆಯೋ ಉನ್ನತಿಯೂ ಅಷ್ಟೇ ಉನ್ನತವಾಗಿರುತ್ತದೆ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಜೀವ ಇರುವವರೆಗೂ ಎಲ್ಲರಿಗೂ ಬೇರೆ ಹೆಸರು ಬೇರೆ ವಿಳಾಸ ಇರುತ್ತದೆ. ಜೀವ ಹೋದ ಮೇಲೆ ಎಲ್ಲರಿಗೂ ಒಂದೇ ಹೆಸರು ಒಂದೇ ವಿಳಾಸ. ಅದು ಹೆಣ ಮತ್ತು ಮಸಣ."
ಮೈಲಾರ ಸಾವಿತ್ರಿಬಾಯಿ

## ಸ್ಫೋಟ ಪ್ರಕರಣ: ಎನ್ಐಎ ಎಂಟ್ರಿ

### ಸಾವಿನ ಸಂಖ್ಯೆ ಮೂರಕ್ಕೆ ಏರಿಕೆ । ಅರಮನೆ ಆವರಣದಲ್ಲಿ ಎನ್ಐಎ ಅಧಿಕಾರಿಗಳಿಂದ ತನಿಖೆ



**ಮೈಸೂರು:** ನಗರದ ಅಂಬಾವಿಲಾಸ ಅರಮನೆ ಮುಂಭಾಗದ ಜಯಮಾರ್ತಾಂಡ ದ್ವಾರದ ಬಳಿ ಬಲೂನಿಗೆ ಹೀಲಿಯಂ ಗ್ಯಾಸ್ ತುಂಬುವ ಸಂದರ್ಭದಲ್ಲಿ ಸಿಲಿಂಡರ್ ಸ್ಫೋಟಗೊಂಡು ಬಲೂನಿ ವ್ಯಾಪಾರಿ ಸೇರಿದಂತೆ ಮೂವರು ಸಾವಿಗೀಡಾದ ಸ್ಥಳವನ್ನು ಶುಕ್ರವಾರ ಎನ್ಐಎ ಅಧಿಕಾರಿಗಳು ಪರಿ ಶೀಲಿಸಿದರು.

ನಗರಕ್ಕೆ ಶುಕ್ರವಾರ ಆಗಮಿಸಿದ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಅಧಿಕಾರಿಗಳ ತಂಡ ಘಟನೆ ಬಗ್ಗೆ ಮಾಹಿತಿ ಕಲೆಹಾಕಿದೆ. ತನಿಖೆಗೆ ಅಗತ್ಯವಾದ ಸಾಮಗ್ರಿಗಳನ್ನು ಸ್ಥಳದಿಂದ ಸಂಗ್ರಹಿಸಿದೆ.

ಅರಮನೆ ಮುಂಭಾಗ ಗುರುವಾರ ಸಂಜೆ ಸ್ಫೋಟ ಸಂಭವಿಸಿತ್ತು. ಬಲೂನು ಮಾರಾಟ ಮಾಡುತ್ತಿದ್ದ ಉತ್ತರ ಪ್ರದೇಶದ ಕನೋಜ್ ಜಿಲ್ಲೆಯ ತೊಫಿಯ ಗ್ರಾಮದ ಸಲೀಂ (40) ಎಂಬಾತ ಸ್ಥಳದಲ್ಲೇ ಸಾವಿಗೀಡಾಗಿದ್ದ. ತೀವ್ರ ಗಾಯಗೊಂಡಿದ್ದ ನಂಜನಗೂಡಿನ ಹೂವಿನ ವ್ಯಾಪಾರಿ ಮಂಜುಳಾ ಸಾವನ್ನಪ್ಪಿದ್ದಾರೆ. ಮತ್ತು ಬೆಂಗಳೂರಿನ ಲಕ್ಷ್ಮಿ ಶುಕ್ರವಾರ ಸಾವನ್ನಪ್ಪಿದ್ದಾರೆ. ಅಲ್ಲದೆ, ಐವರು ಗಾಯಗೊಂಡಿದ್ದಾರೆ.

ಬೆಂಗಳೂರಿನ ಕಾಮಾಕ್ಷಿಪಾಳ್ಯದ ಲಕ್ಷ್ಮಿ, ಕೋಲ್ಕತ್ತಾದ ಶಮಿನಾ ಶಬಿಲ್, ರಾಣೆಬೆನ್ನೂರಿನ ಕೊಟ್ರೇಶ್ ಅವರಿಗೆ ಗಾಯವಾಗಿದೆ. ಲಕ್ಷ್ಮಿ ಅವರ ಸ್ಥಿತಿ ಗಂಭೀರವಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹೊರ ರಾಜ್ಯದಿಂದ ನಗರಕ್ಕೆ ಬಂದಿದ್ದ ಮೂವರು ಯುವಕರು ಮಂಡಿ ಮೊಹಲ್ಲಾದ ಲಾಡ್ಜ್‌ನಲ್ಲಿ ವಾಸಿಸುತ್ತಿದ್ದರು. ಅರಮನೆ ಸುತ್ತಮುತ್ತ ಪುಟ 2ಕ್ಕೆ

### ಮಂಜುಳಾ, ಲಕ್ಷ್ಮೀ ಸಾವು

**ಮೈಸೂರು:** ಅಂಬಾವಿಲಾಸ ಅರಮನೆ ಮುಂಭಾಗದ ಜಯಮಾರ್ತಾಂಡ ದ್ವಾರದ ಬಳಿ, ಬಲೂನ್‌ಗೆ ಹೀಲಿಯಂ ಗ್ಯಾಸ್ ತುಂಬುವ ಸಿಲಿಂಡರ್ ಸ್ಫೋಟಗೊಂಡ ಘಟನೆಯಲ್ಲಿ ಗಾಯಾಳುವಾಗಿದ್ದ ನಂಜನಗೂಡಿನ ಮಂಜುಳಾ ಮತ್ತು ಲಕ್ಷ್ಮೀ ಶುಕ್ರವಾರ ಮೃತಪಟ್ಟಿದ್ದಾರೆ.



ಮಂಜುಳಾ ಅವರಿಗೆ ತಲೆಗೆ ಬಲವಾದ ಗಾಯವಾಗಿತ್ತು. ಅವರು ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಘಟನೆಯಲ್ಲಿ ಬೆಂಗಳೂರಿನ ಕಾಮಾಕ್ಷಿಪಾಳ್ಯದ ಲಕ್ಷ್ಮಿ, ಕೋಲ್ಕತ್ತದ ಪುಟ 2ಕ್ಕೆ

### ಸ್ಫೋಟದ ಸುತ್ತಾ ಅನುಮಾನ?

**ಮೈಸೂರು:** ಹೀಲಿಯಂ ಬಲೂನ್‌ಗಾಗಿ ಬಳಸುತ್ತಿದ್ದ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಪ್ರಕರಣದಲ್ಲಿ ಅನುಮಾನ ವ್ಯಕ್ತವಾಗಿದೆ. ಪ್ರಕರಣ ಆಕಸ್ಮಿಕವೇ ಅಥವಾ ಪೂರ್ವ ನಿಯೋಜಿತವೇ ಎಂಬ ಅನುಮಾನ ಸಾರ್ವಜನಿಕರಿಂದ ವ್ಯಕ್ತವಾಗಿದೆ.

ಸಾವನ್ನಪ್ಪಿದ ಸಲೀಂ ಸೇರಿದಂತೆ ನಾಲ್ವರು ಉತ್ತರ ಪ್ರದೇಶದಿಂದ ಬಂದು ಮಂಡಿ ಮೊಹಲ್ಲಾದ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು. ಪ್ರತಿದಿನ ವ್ಯಾಪಾರ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ತನಿಖೆ ಮುಂದುವರಿದಿದೆ.

ಸೈಕಲ್‌ನಲ್ಲಿ ಹೀಲಿಯಂ ಬಲೂನ್ ಮಾರುತ್ತಿದ್ದಾಗ ಗುರುವಾರ ರಾತ್ರಿ ಪುಟ 2ಕ್ಕೆ

## ಸಲೀಂ ಹೊಟ್ಟೆಪಾಡಿಗಾಗಿ ಬಂದಿದ್ದ: ತನಿಖೆಗೂ ಮುನ್ನವೇ 'ಕ್ಲೀನ್‌ಚಿಟ್'

**ಮೈಸೂರು:** ಮೃತ ಸಲೀಂ ಹೊಟ್ಟೆಪಾಡಿಗಾಗಿ ವಿವಿಧ ಕೆಲಸಗಳನ್ನ ಮಾಡುತ್ತಿದ್ದ. ಘಟನೆ ಬಗ್ಗೆ ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದರು.



ಅಂಬಾವಿಲಾಸ ಅರಮನೆ ಮುಂಭಾಗ ಬಲೂನ್‌ಗೆ ಹೀಲಿಯಂ ತುಂಬುವ ಸಿಲಿಂಡರ್ ಸ್ಫೋಟ ಘಟನೆ ಬಗ್ಗೆ ಮಾತನಾಡಿದ ಸಚಿವರು, ಪ್ರಕರಣದ ಬಗ್ಗೆ ಪೊಲೀಸರು ತನಿಖೆ ನಡೆಸುವುದಕ್ಕೂ ಮೊದಲೇ ಆತ ಹೊಟ್ಟೆಪಾಡಿಗಾಗಿ ಬಂದಿದ್ದ ಎಂದು ಹೇಳಿದ್ದಾರೆ. ಇದೊಂದು ಆಕಸ್ಮಿಕ ಘಟನೆ ಈಗಾಗಲೇ ಎನ್ಐಎಯವರು ಸಂಪೂರ್ಣ ಮಾಹಿತಿ ಪಡೆದಿದ್ದಾರೆ ಎಂದು ಹೇಳಿದರು.

ಮೃತ ಸಲೀಂ ಮೈಸೂರಿನಲ್ಲಿ ಹೊಟ್ಟೆಪಾಡಿಗಾಗಿ ಐಸ್‌ಕ್ಯಾಂಡಿ ಜೊತೆಗೆ ಬಲೂನ್ ಮಾರುತ್ತಿದ್ದ. ಹಿಲೀಯಂ ಪೌಡರ್ ಬಳಸಿ ಗ್ಯಾಸ್ ತಯಾರಿಸಿಕೊಳ್ಳುತ್ತಿದ್ದರು. ಈ ಬಗ್ಗೆ ಕ್ರಮ ವಹಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ತನಿಖಾ ದಳ ಘಟನೆಯ ಎಲ್ಲಾ ಮಾಹಿತಿಯನ್ನು ಪಡೆದುಕೊಂಡಿದೆ. ಇಂತಹ ಘಟನೆ ನಡೆದಾಗ ಎನ್ಐಎ ಮಾಹಿತಿ ಪಡೆಯುವುದು ಸಹಜ. ಅದರಂತೆ ಅವರು ತನಿಖೆ ಮಾಡಲಿ ನಮ್ಮದೇನು ಅಭ್ಯಂತರವಿಲ್ಲ ಎಂದರು.

## ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಚಿವ ಎಚ್‌ಸಿಎಂ



**ಮೈಸೂರು:** ಅಂಬಾವಿಲಾಸ ಅರಮನೆ ಮುಂಭಾಗ ಗುರುವಾರ ರಾತ್ರಿ ಬಲೂನ್‌ಗೆ ಹೀಲಿಯಂ ತುಂಬುವ ಸಿಲಿಂಡರ್ ಸ್ಫೋಟವಾದ ಘಟನೆಯಲ್ಲಿ ಗಾಯಗೊಂಡು ಇಲ್ಲಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಜಿಲ್ಲಾ ಉಸ್ತುವಾರಿ ಪುಟ 2ಕ್ಕೆ

## ಶಾಸಕ ಬೈರತಿ ಬಸವರಾಜ್‌ಗೆ ಜಾಮೀನು



ಬೆಂಗಳೂರು: ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಶಾಸಕ ಬೈರತಿ ಬಸವರಾಜ್ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದೆ.

ಸಿಐಡಿ ಅಧಿಕಾರಿಗಳು ಲುಕ್‌ಔಟ್ ನೋಟಿಸ್ ಜಾರಿಮಾಡಿದ್ದರು. ಬೈರತಿ ಬಂಧನ ಭೀತಿ ಯಿಂದ ನಾಪತ್ತೆಯಾಗಿದ್ದರು. ಸಿಐಡಿ ಅಧಿಕಾರಿಗಳ ಬಂಧನ ಭಯದ ನಡುವೆಯೇ ಹೈಕೋರ್ಟ್ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು

## ಚೆಲುವಾಂಬ ಆಸ್ಪತ್ರೆಯಲ್ಲಿ ಬೆಂಕಿ: ಹಾಸಿಗೆಗಳು ಭಸ್ಮ



**ಮೈಸೂರು:** ಮೈಸೂರಿನ ಪ್ರತಿಷ್ಠಿತ ಕೆ.ಆರ್ ಆಸ್ಪತ್ರೆಯ ಆವರಣದಲ್ಲಿರುವ ಚೆಲುವಾಂಬ ಆಸ್ಪತ್ರೆಯಲ್ಲಿ ಅಗ್ನಿ ಅವಘಡ ಸಂಭವಿಸಿದ್ದು ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ಕೆ.ಆರ್.ಆಸ್ಪತ್ರೆಯ ಹಳೆಯ ಕಟ್ಟಡಗಳ ನವೀಕರಣ ಕಾಮಗಾರಿ ನಡೆಯುತ್ತಿದ್ದು ಚಲುವಾಂಬ ಆಸ್ಪತ್ರೆಯಲ್ಲಿ ಹಾಸಿನಗಳನ್ನು ಸೆಡ್ ವೊಂದರಲ್ಲಿ ಸಂಗ್ರಹಿಸಿ ಇಡಲಾಗಿತ್ತು ಕಾಮಗಾರಿ ವೇಳೆ ವೆಲ್ಡಿಂಗ್ ಕಿಡಿಯಿಂದಾಗಿ ಹೆಡ್‌ನಲ್ಲಿ ಹಾಸಿಗೆಗಳಿಗೆ ಬೆಂಕಿ ಹೊತ್ತಿಕೊಂಡಿತ್ತು. ಅಪಾರ ಪ್ರಮಾಣ ಹೊಗೆ ತುಂಬಿಕೊಂಡಿದ್ದ ಪರಿಣಾಮ ಕೆಲಕಾಲ ಆತಂಕ ಮನೆ ಮಾಡಿತ್ತು. ಸುಮಾರು 20 ಹಾಸಿಗೆಗಳು ಸುಟ್ಟುಹೋಗಿದ್ದು ಯಾವುದೇ ಅಪಾಯ ಸಂಭವಿಸಿಲ್ಲ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದರು.

### ರಾಯಭಾರಿ ಆಯ್ಕೆ ಆಗಿರುವುದಕ್ಕೆ ನನಗೆ ಹೆಮ್ಮೆ ಇದೆ

**ಬೆಂಗಳೂರು:** ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 17ನೇ ಆವೃತ್ತಿಯ ರಾಯಭಾರಿಯಾಗಿ ಆಯ್ಕೆಯಾಗಿರುವ,ನಟ ಪ್ರಕಾಶ್ ರಾಜ್ ಸಾಮಾಜಿಕ ಮಾಧ್ಯಮದಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ.



ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಒಂದನ್ನು ಹಂಚಿಕೊಂಡಿರುವ ನಟ ಪ್ರಕಾಶ್ ರಾಜ್ ಅವರು, 17 ವರ್ಷಗಳ ಹಿಂದೆ ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ನಾನೇ ಉದ್ಘಾಟಿಸಿದ್ದೆ. ರಾಯಭಾರಿ ಆಗಿ ನಾನು ಆಯ್ಕೆ ಆಗಿರುವುದಕ್ಕೆ ನನಗೆ ಹೆಮ್ಮೆ ಇದೆ. ಎಲ್ಲರ ಜತೆ ಸೇರಿ ಸಿನಿಮಾವನ್ನು ಆಚರಿಸೋಣ' ಎಂದು ಬರೆದುಕೊಂಡಿದ್ದಾರೆ.

'ವಿಧಾನಸೌಧದ ಮುಂಭಾಗದಲ್ಲಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನೆ ಆಗಲಿದ್ದು,ಜನವರಿ 29ರಿಂದ ಫೆಬ್ರುವರಿ 6ರವರೆಗೆ ಈ ಕಾರ್ಯಕ್ರಮ ನಡೆಯಲಿದೆ. ಇನ್ನೂ ಈ ಬಾರಿಯ ಸಿನಿಮೋತ್ಸವದಲ್ಲಿ ಮಹಿಳಾ ಸಬಲೀಕರಣ ಆಧಾರಿತ ಚಿತ್ರಗಳಿಗೆ ಆದ್ಯತೆ ನೀಡಲಾಗಿದೆ.

ರಾಜಾಜಿನಗರದ ಲುಲುಮಾಲ್‌ನಲ್ಲಿರುವ ಸಿನಿ ಪೊಲಿಸ್‌ನ 11 ಪರದೆಗಳಲ್ಲಿ ಹಾಗೂ ಡಾ. ರಾಜ್ ಕುಮಾರ್ ಭವನ, ಕಲಾವಿದರ ಸಂಘ, ಚಾಮರಾಜಪೇಟೆ ಹಾಗೂ ಬನಶಂಕರಿಯಲ್ಲಿರುವ ಸುಚಿತ್ರ ಫಿಲಂ ಸೊಸೈಟಿ ಚಿತ್ರಮಂದಿರದಲ್ಲಿ ಚಲನಚಿತ್ರಗಳ ಪ್ರದರ್ಶನ ನಡೆಯಲಿದೆ.

## ಲೋಕಲ್ ಫೈಟ್: ಬಿಜೆಪಿ 'ಮೈತ್ರಿ ಕಟ್'

**ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆಗೆ ಎಚ್.ಡಿ.ದೇವೇಗೌಡ ವ್ಯಂಗ್ಯ**





**ಬೆಂಗಳೂರು:** ಕರ್ನಾಟಕದಲ್ಲಿ ಲೋಕಸಭೆ, ವಿಧಾನಸಭೆಗಷ್ಟೇ ಬಿಜೆಪಿ–ಜೆಡಿಎಸ್ ಮೈತ್ರಿ ನಡೆದಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೈತ್ರಿ ಮಾಡಿಕೊಳ್ಳಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಿಳಿಸಿದರು.

ಜೆಡಿಎಸ್ ಭವನದಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಾವು ಪ್ರತ್ಯೇಕವಾಗಿ ಹೋರಾಟ ಮಾಡ್ತೇವೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಜೊತೆಗೆ ಇರುತ್ತೇವೆ. ವಿಧಾನ ಪರಿಷತ್ 4 ಸ್ಥಾನಗಳ ಚುನಾವಣೆಯಲ್ಲಿ ಒಂದು ಸ್ಥಾನ ಜೆಡಿಎಸ್‌ಗೆ 3 ಸ್ಥಾನ ಬಿಜೆಪಿಗೆ ನೀಡುವ ಬಗ್ಗೆ ಪ್ರಾಥಮಿಕ ಚರ್ಚೆ ಆಗಿದೆ ಅಂತ ಸ್ಪಷ್ಟಪಡಿಸಿದ್ದಾರೆ.

ಸ್ಥಳೀಯ ಚುನಾವಣೆಯ ಸೀಟು ಹಂಚಿಕೆ ಬಗ್ಗೆ ಮೋದಿ, ಶಾ ಜೊತೆಗೆ ಚರ್ಚೆ ಮಾಡಲು ಆಗಲ್ಲ. ಮೋದಿ, ಶಾ ಜೊತೆಗೆ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆ ಸೀಟು ಹಂಚಿಕೆ ಬಗ್ಗೆ ಚರ್ಚೆ ಮಾಡ್ತೀವಿ ಅಂತೇಳುವ ಮೂಲಕ ಮೈತ್ರಿ ಇದೆ ಎಂದು ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾಂಗ್ರೆಸ್ ಒಳಜಗಳ ನೋಡಿದರೆ 2028ಕ್ಕೂ ಮುನ್ನವೇ ವಿಧಾನಸಭಾ ಚುನಾವಣೆ ಪುಟ 2ಕ್ಕೆ

### ಅಹಿಂದ ನಾಯಕನಿಗೆ ಕ್ಷೇತ್ರ ಸಿಕ್ಕಿಲ್ಲ: ಸಿದ್ದರಾಮಯ್ಯಗೆ ಎಚ್‌ಡಿಡಿ ಲೇವಡಿ!



**ಬೆಂಗಳೂರು:** ಮೈಸೂರಿನಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು ಜ.25ಕ್ಕೆ ಅಹಿಂದ ಸಮಾವೇಶ ನಡೆಸುವ ವಿಚಾರಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ತಿರುಗೇಟು ನೀಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಗುರುತಿಸಿದ್ದು ನಾನು ಅಂತ ಪುಟ 2ಕ್ಕೆ

## ಅಧಿಕಾರ ಯಾರಿಗೂ ಶಾಶ್ವತ ಅಲ್ಲ: ಯತೀಂದ್ರ ಅಚ್ಚರಿ ಹೇಳಿಕೆ

**ಬೆಳಗಾವಿ:** ಸಿಎಂ, ಡಿಸಿಎಂ ಸೇರಿದಂತೆ ಯಾರಿಗೂ ಅಧಿಕಾರ ಶಾಶ್ವತ ಅಲ್ಲ ಎಂದು ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಬೆಳಗಾವಿಯ ಕೌಲಗುಡ್ಡ ಗ್ರಾಮದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನಾನು ಸಾಮಾನ್ಯ ಕಾರ್ಯಕರ್ತನಾಗಿ ಇರ್ತೀನಿ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದರು. ನಾವೆಲ್ಲರೂ ಕೂಡಾ ಸಾಮಾನ್ಯ ಕಾರ್ಯಕರ್ತರು ಎಂದರು.



ಸಾಮಾನ್ಯ ಕಾರ್ಯಕರ್ತರಾಗಿಯೇ ಕೆಲಸ ಮಾಡಬೇಕು. ಅಧಿಕಾರ ಏನೂ ಬರುತ್ತೆ, ಅದು ನಮಗೆ ಶಾಶ್ವತ ಅಲ್ಲ. ಅದು ಸಿಎಂಗೆ ಆಗಲಿ, ಡಿಸಿಎಂಗೆ ಆಗಲಿ, ಮಂತ್ರಿಗಳಿಗಾಗಲಿ, ನಮಗಾಗಲಿ ಯಾರಿಗೂ ಶಾಶ್ವತ ಅಲ್ಲ. ಪಕ್ಷ ಕಟ್ಟೋ ಕೆಲಸ, ಪಕ್ಷ ಹೇಳುವ ಕೆಲಸ ಮಾಡಬೇಕು ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲಗಳು ಮುಂದುವರಿದಿರುವ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಶುಕ್ರವಾರ ದೆಹಲಿಗೆ ತೆರಳಿದರು. ನಾಳೆ ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಣಿಯಲ್ಲಿ ಸಿದ್ದರಾಮಯ್ಯ ಭಾಗವಹಿಸುವರು. ಈ ಸಂದರ್ಭದಲ್ಲಿ ಹೈಕಮಾಂಡ್ ನಾಯಕರನ್ನು ಪ್ರತ್ಯೇಕವಾಗಿ ಭೇಟಿಯಾಗುವ ಸಾಧ್ಯತೆ ಇದೆ. ಹೀಗಾಗಿ, ಸಿಎಂ ಬದಲಾವಣೆ ಗೊಂದಲಗಳ ಬಗ್ಗೆ ಮತ್ತೊಂದು ಸುತ್ತಿನ ಚರ್ಚೆಯಾಗಲಿದೆಯೇ ಎಂಬ ಕುತೂಹಲ ಹೆಚ್ಚಾಗಿದೆ. ಈ ಬೆನ್ನಲ್ಲೇ ಯತೀಂದ್ರ ಅವರು ಈ ಹೇಳಿಕೆ ನೀಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

## ಗಣಿಗಾರಿಕೆ: ಪ್ರಪಾತಕ್ಕೆ ಟಿಪ್ಪರ್ ಬಿದ್ದು ಚಾಲಕ ಸಾವು




**ಮಂಡ್ಯ:** ಕಲ್ಲು ಗಣಿಗಾರಿಕೆ ಮಾಡುತ್ತಿದ್ದ ಪ್ರಪಾತಕ್ಕೆ ಟಿಪ್ಪರ್ ಬಿದ್ದ ಪರಿಣಾಮ ಟಿಪ್ಪರ್ ಚಾಲಕ ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಜಟಕ ಗೇಟ್ ಬಳಿ ಪುಟ 2ಕ್ಕೆ

## ಮೊಟ್ಟೆ ಕ್ಯಾನ್ಸರ್ ಕಾರಕವಲ್ಲ: ಸಚಿವ ದಿನೇಶ್ ಗುಂಡೂರಾವ್

**ಬೆಂಗಳೂರು:** ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶ ವಿಲ್ಲ. ಮೊಟ್ಟೆ ಪರೀಕ್ಷಾ ವರದಿಯಲ್ಲಿ ಸೇಫ್ ಆಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದ ವಿವಿಧ ಜಿಲ್ಲೆಗಳಿಂದ ಮೊಟ್ಟೆಯನ್ನು ಸಂಗ್ರಹಿಸಿ, ಲ್ಯಾಬ್‌ಗೆ ರವಾನೆ ಮಾಡಲಾಗಿತ್ತು. ಇದೀಗ ವರದಿ ಬಂದಿದೆ. ಮೊಟ್ಟೆಯಲ್ಲಿ ಯಾವುದೇ ಕ್ಯಾನ್ಸರ್ ಕಾರಕ ಅಂಶವಿಲ್ಲ. ಮೊಟ್ಟೆ ಸೇಫ್ ಆಗಿದೆ. ಸೇವನೆ ಮಾಡಬಹುದು ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ. ಸುಮ್ಮನೇ ಆತಂಕ ಬೇಡ ಎಂದು ಅವರು ಹೇಳಿದರು.





ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಸೇವೆ ಕಡಿತ ವಿಚಾರವಾಗಿ ಮಾತನಾಡಿ, ಎಲ್ಲೆಲ್ಲಿ ಕಡಿಮೆ ರೋಗಿಗಳು ಬರುತ್ತಾರೆಯೋ ಅಲ್ಲಿನ ವೈದ್ಯರನ್ನು ಶಿಫ್ಟ್ ಮಾಡುತ್ತೇವೆ. ಸ್ಪೆಷಲಿಸ್ಟ್‌ಗಳನ್ನು ಶಿಫ್ಟ್ ಮಾಡಿ, ಇಬ್ಬರು ಪುಟ 2ಕ್ಕೆ

## ಬಸ್ ಚಾಲಕ ಸಾವು: 7ಕ್ಕೇರಿದ ಸಾವಿನ ಸಂಖ್ಯೆ

**ಚಿತ್ರದುರ್ಗ:** ಜಿಲ್ಲೆಯ ಹಿರಿಯೂರು ತಾಲೂಕಿನ ಗೊರ್ಲತ್ತು ಗ್ರಾಮದ ಬಳಿ ಲಾರಿ ಡಿಕ್ಕಿಯಾಗಿ ಖಾಸಗಿ ಬಸ್ ಹೊತ್ತಿ ಉರಿದ ಘಟನೆಯಲ್ಲಿ ಖಾಸಗಿ ಬಸ್ ಚಾಲಕ ಚಿಕಿತ್ಸೆ ಫಲಕಾರಿಯಾದೆ ಶುಕ್ರವಾರ ಮೃತಪಟ್ಟಿದ್ದಾರೆ. ಈ ಮೂಲಕ ಮೃತಪಟ್ಟವರ ಸಂಖ್ಯೆ 7ಕ್ಕೆ ಏರಿಕೆಯಾಗಿದೆ.

ಗೊರ್ಲತ್ತು ಗ್ರಾಮದ ಬಳಿ ನಿನ್ನೆ ಸಂಭವಿಸಿದ ಭೀಕರ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಖಾಸಗಿ ಬಸ್ ಚಾಲಕ ಮೊಹಮ್ಮದ್ ರಫೀಕ್ (42) ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಹಾವೇರಿ ಜಿಲ್ಲೆ ಶಿಗ್ಗಾಂವಿ ನಿವಾಸಿ ರಫೀಕ್ ಅಪಘಾತದ ಬಳಿಕ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ನಿನ್ನೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ ಮೃತಪಟ್ಟಿದ್ದಾರೆ.

## ರೈಲ್ವೆ ಪ್ರಯಾಣ ದರ ಏರಿಕೆ: ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಕಿಡಿ

**ದಾವಣಗೆರೆ:** ಕೇಂದ್ರ ಸರ್ಕಾರ ರೈಲ್ವೆ ಪ್ರಯಾಣ ದರ ಏರಿಕೆ ಮಾಡಿದೆ. ಜನಸಾಮಾನ್ಯರ ಮೇಲೆ ಆಗಿರುವ ಹೊರೆಯನ್ನು ಬಿಜೆಪಿ ಮುಖಂಡರು ಪ್ರಶ್ನಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ರಾಜ್ಯ ಸರ್ಕಾರದ ವಿರುದ್ಧವಷ್ಟೇ ಮಾತನಾಡುವ ಬಿಜೆಪಿ ನಾಯಕರು, ರೈಲ್ವೆ ಪ್ರಯಾಣ ದರ ಏರಿಕೆಯಿಂದ ಜನರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ತುಟಿ ಬಿಚ್ಚುತ್ತಿಲ್ಲ ಎಂದು ಕಿಡಿಕಾರಿದರು.



ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ (ಸಿಡಬ್ಲ್ಯೂಸಿ) ವರಿಷ್ಠರು ಕರೆದಿದ್ದಾರೆ. ಶನಿವಾರ ನಡೆಯುವ ಸಭೆಗೆ ಶುಕ್ರವಾರ ಸಂಜೆ ದೆಹಲಿಗೆ ಹೊರಟಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಭಾರಿ ಪೈಪೋಟಿ ನಡೆಯುತ್ತಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಸಿಡಿಮಿಡಿಗೊಂಡ ಸಿದ್ದರಾಮಯ್ಯ, ಮಾಧ್ಯಮಗಳಿಗೆ ಸಿಎಂ ಕುರ್ಚಿ ಬಿಟ್ಟು ಬೇರೆ ವಿಚಾರಗಳೇ ಇಲ್ಲವೇ ಎಂದು ಅಸಮಾಧಾನ ಹೊರಹಾಕಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಬಸ್ ಅಗ್ನಿ ದುರಂತದಲ್ಲಿ ಲಾರಿ ಚಾಲಕನ ತಪ್ಪು ಇರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.ಬಸ್‌ಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಿದೆ. ತನಿಖೆ ಪೂರ್ಣಗೊಂಡ ಬಳಿಕ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

## ನಾಯಕತ್ವ ಬದಲಾವಣೆಗೆ ಕೈ ಹೈಕಮಾಂಡ್ ಹಿಂದೇಟು?

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ನಲ್ಲಿ ಭುಗಿಲೆದ್ದಿರುವ ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಕೈ ಹೈಕಮಾಂಡ್ ವರದಿ ಪಡೆದಿದೆ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಗೆ ಇದು ಸೂಕ್ತ ಸಮಯವಲ್ಲ ಎಂಬ ವರದಿಗಳು ರಾಹುಲ್ ಗಾಂಧಿಗೆ ಸಿಕ್ಕಿದೆ ಎಂದು ತಿಳಿದು ಬಂದಿದೆ.

ರಾಜ್ಯ ಸರ್ಕಾರದಲ್ಲಿ ಬದಲಾವಣೆ ಮಾಡಿದರೆ ಉಂಟಾಗುವ ಪರಿಣಾಮಗಳ ಕುರಿತು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ತಂತ್ರಜ್ಞ ಸುನಿಲ್ ಕಾನುಗೋಳ್ ಸೇರಿದಂತೆ ವಿವಿಧ ಮೂಲಗಳಿಂದ ವರದಿ ತರಿಸಿಕೊಂಡಿದ್ದಾರೆ ಎನ್ನಲಾಗಿದೆ. ಹೀಗಾಗಿಯೇ ರಾಜ್ಯದಲ್ಲಿ ಸಿಎಂ ಬದಲಾವಣೆ ನಿರ್ಧಾರವನ್ನು ರಾಹುಲ್ ಗಾಂಧಿ ಸದ್ಯಕ್ಕೆ ತಡಹಿಡಿದಿದ್ದಾರೆ ಎಂದು ತಿಳಿದುಬಂದಿದೆ.

ದೆಹಲಿಗೆ ಹೋಗಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ರಾಹುಲ್ ಗಾಂಧಿ ಭೇಟಿಗೆ ಅವಕಾಶ ಸಿಕ್ಕಿಲ್ಲ. ಸಿದ್ದರಾಮಯ್ಯ ಬೆಂಬಲಿಗರಾದ ಎಂಎಲ್‌ಸಿ ಬಿ.ಕೆ.ಹರಿಪ್ರಸಾದ್ ಮತ್ತು ಸಚಿವ ಕೆಜೆ ಜಾರ್ಜ್ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಬದಲಾವಣೆ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಗೆ ಇದು ಸೂಕ್ತ ಸಮಯವಲ್ಲ ಎಂದು ಸುನಿಲ್ ಕನುಗೋಳ್ ಸೇರಿದಂತೆ ವಿವಿಧ ಮೂಲಗಳಿಂದ ರಾಹುಲ್ ಗಾಂಧಿ ಅವರಿಗೆ ವರದಿ ಹೋಗಿದೆ ಎಂದು ಗೊತ್ತಾಗಿದೆ. ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ನಾಯಕತ್ವದ ಬಗ್ಗೆ ಗೊಂದಲ ಪಕ್ಷದ ರಾಜ್ಯ ಘಟಕದಲ್ಲಿ ಮಾತ್ರ ಇದೆ. ಹೈಕಮಾಂಡ್ ನಲ್ಲಿ ಇಲ್ಲ ಎಂದು ಹೇಳಿದ್ದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕೇರಳ ಮತ್ತು ಹರಿಯಾಣ ರಾಜ್ಯಗಳಲ್ಲಿ ಕಾರ್ಯನಿರತರಾಗಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ಗೆದ್ದರೆ ವೇಣುಗೋಪಾಲ್ ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿದ್ದಾರೆ. ಸುರ್ಜೇವಾಲಾ ಹರಿಯಾಣ ಪಿಸಿಸಿ ಮುಖ್ಯಸ್ಥರಾಗುವ ಆಕಾಂಕ್ಷೆ ಹೊಂದಿದ್ದಾರೆ.

ಹೀಗಾಗಿ ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಯ ನಿರ್ಧಾರ ರಾಹುಲ್ ಗಾಂಧಿಯವರ ಬಳಿ ಮಾತ್ರ ಇದೆ. ನಾಳೆ ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯ ನಂತರ ರಾಹುಲ್ ಗಾಂಧಿ ಯುರೋಪ್ ಪ್ರವಾಸ ಹೋಗಿ ಜನವರಿ 10ರ ನಂತರ ಹಿಂತಿರುಗಲಿದ್ದಾರೆ. ಅಲ್ಲಿಯವರೆಗೆ, ಸಂಪುಟ ಪುನಾರಚನೆ

### ಹೈಕಮಾಂಡ್ ಜೊತೆ ಸಿಎಂ ಚರ್ಚೆ

**ನವದೆಹಲಿ:** ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲ ಮುಂದುವರಿದಿರುವ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ದೆಹಲಿಗೆ ತೆರಳಿದರು. ಶನಿವಾರ ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಣಿಯಲ್ಲಿ ಸಿದ್ದರಾಮಯ್ಯ ಭಾಗವಹಿಸುವರು. ಈ ಸಂದರ್ಭದಲ್ಲಿ ಹೈಕಮಾಂಡ್ ನಾಯಕರನ್ನು ಪ್ರತ್ಯೇಕವಾಗಿ ಭೇಟಿಯಾಗುವ ಸಾಧ್ಯತೆ ಇದೆ. ಸಿಎಂ ಬದಲಾವಣೆ ಗೊಂದಲಗಳ ಬಗ್ಗೆ ಮತ್ತೊಂದು ಸುತ್ತಿನ ಚರ್ಚೆಯಾಗಲಿದೆಯೇ ಎಂಬ ಕುತೂಹಲ ಹೆಚ್ಚಾಗಿದೆ.

ಕಾರ್ಯಕಾರಿ ಸದಸ್ಯರ ಹೊರತಾಗಿ ಕಾಂಗ್ರೆಸ್ ಆಡಳಿತ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮಾತ್ರ ಕಾಂಗ್ರೆಸ್ ಹೈಕಮಾಂಡ್ ಆಹ್ವಾನ ನೀಡಿದೆ. ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶ ಸಿಎಂ ಸುಖುವಿಂದರ್ ಸಿಂಗ್ ಸುಖುಗೆ ಆಹ್ವಾನ ನೀಡಿದೆ.

## ಮೊದಲ ಪುಟದಿಂದ

### ಅಹಿಂದ ನಾಯಕನಿಗೆ ಕ್ಷೇತ್ರ ಸಿಕ್ಕಿಲ್ಲ: ಸಿದ್ದರಾಮಯ್ಯಗೆ ಎಚ್‌ಡಿಡಿ ಲೇವಡಿ!

ಹೇಳಲ್ಲ. ಅವರೇ ಹೇಳಲಿ. ನನ್ನ ಬಗ್ಗೆ ಕಠಿಣವಾಗಿ ಏನು ಬೇಕಾದರೂ ಅವರು ಮಾತಾಡಲಿ. ಅವರ ಮಗ ಸಾವನ್ನಪ್ಪಿದಾಗ ಅವರ ಮನೆಗೆ ನಾನು ಹೋಗಿದ್ದೆ. ಎರಡನೇ ಮಗನನ್ನು ರಾಜಕೀಯಕ್ಕೆ ತನ್ನಿ ಅಂತ ಅಂದು ಹೇಳಿದ್ದೆ. ಅವರು ಬಾದಾಮಿಯಲ್ಲಿ ಚುನಾವಣೆಗೆ ನಿಂತರು. ಕೋಲಾರ, ಮೈಸೂರು, ಬಾದಾಮಿ ಅಂತ ಚರ್ಚೆ ಆಯ್ತು. ನೀವು ಅಹಿಂದ ನಾಯಕರು. ಆದರೂ ಒಂದು ಕ್ಷೇತ್ರಕ್ಕೆ ಹುಡುಕಾಟ ಮಾಡಿದ್ದೀರಿಲ್ಲಾ? ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು.

ನೀವು ಅಹಿಂದ ಲೀಡರ್ ಆಗಿದ್ದರೆ ಎಲ್ಲಿ ಬೇಕಾದರೂ ನಿಲ್ಲಬಹುದಿತ್ತು. ನಿಮ್ಮ ಮಗ ಬಿಟ್ಟ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದೀರಿ. ಇದು ಅಹಿಂದವೇ ಎಂದು ಲೇವಡಿ ಮಾಡಿದರು. ಯಾಕೆ ನೀವು ನಿಮ್ಮ ಮಗನನ್ನ ಖಾಲಿ ಮಾಡಿಸಿದ್ರಿ? ದೇವೇಗೌಡರು ಮೂಲೆ ಕೂತ ಅಂತ ಲೆಕ್ಕಾ ಹಾಕಿದ್ರಿ. ಗಟ್ಟಿ ಮನಸ್ಸು ಮಾಡಿದ್ದೇನೆ ಎಂದು ಹಳೆಯದನ್ನು ಕೆದಕಿ ಸಿದ್ದರಾಮಯ್ಯಗೆ ಟಕ್ಕರ್ ಕೊಟ್ಟಿದ್ದಾರೆ.

### ಸ್ಫೋಟ ಪ್ರಕರಣ: ಎನ್‌ಐಎ ಎಂಟ್ರಿ

ವ್ಯಾಪರ ನಡೆಸುತ್ತಿದ್ದರು. ಸಲೀಂ ಎಂದಿನಂತೆ ಜಯಮಾರ್ತಾಂಡ ದ್ವಾರದ ಬಳಿ ವ್ಯಾಪಾರ ನಡೆಸುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಗಾಯಾಳು ಮಂಜುಳಾ ಸಾವು

ಶಮಿನಾ ಶಬಿಲ್, ರಾಣೆಬೆನ್ನೂರಿನ ಕೊಟ್ರೇಶ್ ಹಾಗೂ ರಂಜಿತಾ ಅವರಿಗೆ ಗಾಯವಾಗಿತ್ತು.

### ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಚಿವ ಎಚ್‌ಸಿಎಂ

ಸಚಿವ ಡಾ.ಎಚ್.ಸಿ.ಮಹದೇವಪ್ಪ ಶುಕ್ರವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಗಾಯಗೊಂಡವರ ಸ್ಥಿತಿ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಇದು ಅನಿರೀಕ್ಷಿತ ಘಟನೆ. ಗಾಯಗೊಂಡಿರುವವರಲ್ಲಿ ಇಬ್ಬರ ಸ್ಥಿತಿ ಇನ್ನೂ ಗಂಭೀರವಾಗಿದೆ. ಗಾಯಗೊಂಡವರು ಪ್ರವಾಸಕ್ಕೆ ಬಂದಿದ್ದವರು. ಸರ್ಕಾರವೇ ಚಿಕಿತ್ಸಾ ವೆಚ್ಚ ಭರಿಸಲಿದೆ ಎಂದು ಹೇಳಿದರು. ಇಂತಹ ಘಟನೆಗಳು ಪಾಠ. ಇಂಥದು ಮರುಕಳಿಸದಂತೆ ನೋಡಿಕೊಳ್ಳುವ ಕೆಲಸವನ್ನು ಮಾಡಬೇಕಾಗುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಕೆ.ಆರ್. ಆಸ್ಪತ್ರೆಯ ಡೀನ್ ಡಾ.ದಾಕ್ಷಾಯಿಣಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಇದ್ದರು.

### ಸ್ಫೋಟದ ಸುತ್ತಾ ಅನುಮಾನ?

ಸಿಲಿಂಡರ್ ಸ್ಫೋಟವಾಗಿದೆ. ಪ್ರತ್ಯಕ್ಷದರ್ಶಿ ಅರಮನೆ ಗೈಡ್ ನೀಡಿದ ಮಾಹಿತಿ ಪ್ರಕಾರ ಬಲೂನ್ ಮಾರಾಟಗಾರ ಅರಮನೆ ಮುಂಭಾಗದಲ್ಲಿ ನಿಂತು ಯಾವತ್ತೂ ಬಲೂನ್ ಮಾರುತ್ತಿರಲಿಲ್ಲ. ಆತ ಬಂದ ಕೂಡಲೇ ಸ್ಫೋಟ ಸಂಭವಿಸಿದೆ ಎಂದು ತಿಳಿಸಿದ್ದಾರೆ. ಗುರುವಾರವೂ ಬಲೂನು ಮಾರಾಟ ಮಾಡಿರಲಿಲ್ಲ. ಹಾಗಾದರೆ ಅರಮನೆ ಮುಂಭಾಗವೇ ಹೀಲಿಯಂ ಸಿಲಿಂಡರ್ ಸ್ಫೋಟ ಯಾಕಾಯ್ತು ಎಂಬ ಪ್ರಶ್ನೆ ಎದ್ದಿದೆ.

ಅರಮನೆ ಮಂಡಳಿ ಕ್ರಿಸ್‌ಮಸ್ ರಜೆ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಿರುವ 10 ದಿನಗಳ ಮಾಗಿ ಉತ್ಸವ-ಫಲಪುಷ್ಪ ಪ್ರದರ್ಶನ ಆರಂಭಿಸಿದೆ. ಪ್ರತಿದಿನ ರಾತ್ರಿ ಸಂಗೀತ ಕಾರ್ಯಕ್ರಮ ಆಯೋಜನೆಗೊಂಡಿದೆ.

### ಮೊಟ್ಟೆ ಕ್ಯಾನ್ಸರ್ ಕಾರಕವಲ್ಲ: ಸಚಿವ ದಿನೇಶ್ ಗುಂಡೂರಾವ್

ಎಂಬಿಬಿಎಸ್ ವೈದ್ಯರನ್ನ ಹಾಕುತ್ತೇವೆ. ಯಾವುದೇ ಸಮುದಾಯ ಕೇಂದ್ರಗಳನ್ನು ಮುಚ್ಚಲ್ಲ. ಸ್ಪೆಷಲಿಸ್ಟ್ ವೈದ್ಯರನ್ನ ಶಿಫ್ಟ್ ಮಾಡಿದ ಬಳಿಕ ಇಬ್ಬರು ಎಂಬಿಬಿಎಸ್ ಡಾಕ್ಟರ್ ಅನ್ನು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಹಾಕುತ್ತೇವೆ. ಸಮುದಾಯ ಕೇಂದ್ರಗಳು 24 ಗಂಟೆ ಸೇವೆ ನೀಡುತ್ತವೆ ಎಂದು ಸ್ಪಷ್ಟನೆ ನೀಡಿದ್ದಾರೆ.

### ಲೋಕಲ್ ಫೈಟ್: ಬಿಜೆಪಿ 'ಮೈತ್ರಿ ಕಟ್'

ಬರಬಹುದು. ಬಿಜೆಪಿಯನ್ನ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ತರಲು ಕಾರ್ಯಕರ್ತರು ಸಂಕಲ್ಪ ಮಾಡಬೇಕಾಗಿದೆ. ರಾಜ್ಯಾಧ್ಯಕ್ಷನಾಗಿ ರಾಜ್ಯ ಪ್ರವಾಸ ಮಾಡಿ ನಾಡಿಮಿಡಿತ ಅರ್ಥ ಮಾಡಿಕೊಂಡಿದ್ದೇನೆ ಎಂದು ಹೇಳಿದರು.

130-140 ಸ್ಥಾನಗಳೊಂದಿಗೆ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲಿದೆ ಎಂದು ಹೇಳುವ ಮೂಲಕ ಜೆಡಿಎಸ್ ಜೊತೆ ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿಯನ್ನ ತಳ್ಳಿಹಾಕಿದ್ದಾರೆ. ಈ ನಡುವೆ ಪ್ರತಿಕ್ರಿಯಿಸಿದ ಮಾಜಿ ಪ್ರಧಾನಿ ಎಚ್‌ಡಿಡಿ, ವಿಜಯೇಂದ್ರ ಹೇಳಿಕೆಗೆ ಪರೋಕ್ಷ ಟಾಂಗ್ ಕೊಟ್ಟಿದ್ದಾರೆ. ವಿಜಯೇಂದ್ರ ಬಹಳ ಉತ್ಸಾಹದಿಂದ ಓಡಾಡುತ್ತಿದ್ದಾರೆ. ಯಂಗ್ ಸ್ಟಾರ್ ರೀತಿ ಕೆಲಸ ಮಾಡ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

### ನಾಯಕತ್ವ ಬದಲಾವಣೆಗೆ ಕೈ ಹೈಕಮಾಂಡ್ ಹಿಂದೇಟು?

ಅಥವಾ ರಾಜ್ಯದಲ್ಲಿ ಸಿಎಂ ಬದಲಾವಣೆಯ ಬಗ್ಗೆ ಯಾವುದೇ ನಿರ್ಧಾರ ಸಾಧ್ಯವಿಲ್ಲ.

ಸಿದ್ದರಾಮಯ್ಯ ಅವರು ಜನವರಿ 6ರಂದು 7 ವರ್ಷ 238 ದಿನಗಳ ಆಡಳಿತ ಪೂರೈಸುವ ಮೂಲಕ ದೇವರಾಜ್ ಅರಸ್ ಅವರು ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ನಿರ್ಮಿಸಿದ್ದ ದಾಖಲೆಯನ್ನು ಮುರಿಯುವ ಸಾಧ್ಯತೆಯಿದೆ. ಅಲ್ಲದೆ, ದಾಖಲೆಯ 17ನೇ ಬಜೆಟ್ ಅನ್ನು ಮಂಡಿಸುವ ನಿರೀಕ್ಷೆಯಿದೆ.

### ಗಣಿಗಾರಿಕೆ: ಪ್ರಪಾತಕ್ಕೆ ಟಿಪ್ಪರ್ ಬಿದ್ದು ಚಾಲಕ ಸಾವು

ಕ್ವಾರೆಯೊಂದರಲ್ಲಿ ನಡೆದಿದೆ. ಚಾಲಕ ಲಕ್ಷ್ಮಣ್ ಎಂಬಾತ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.

ರವಿ ಹಾಗೂ ಕಾಂತ ಎಂಬುವವರು ಸೇರಿ ಕ್ವಾರೆ ನಡೆಸುತ್ತಿದ್ದರು. ಗಣಿಗಾರಿಕೆ ಮಾಡಿ ಆ ಸ್ಥಳ ಪ್ರಪಾತದಂತೆ ಆಗಿತ್ತು. ನಿನ್ನೆ ಮಧ್ಯರಾತ್ರಿ ಟಿಪ್ಪರ್ ಚಲಿಸುವ ವೇಳೆ ಪ್ರಪಾತಕ್ಕೆ ಬಿದ್ದಿದೆ. ಪ್ರಪಾತದಲ್ಲಿ ನೀರು ಇದ್ದ ಕಾರಣ ಟಿಪ್ಪರ್ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಚಾಲಕ ಲಕ್ಷ್ಮಣ್ ಎಂಬಾತ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಬಳಿಕ ಅಗ್ನಿಶಾಮದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೃತ ಲಕ್ಷ್ಮಣ್ ಮೃತ ದೇಹವನ್ನು ಮೇಲೆತ್ತಿದ್ದಾರೆ. ಬೆಳ್ಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

## ವಾಲ್ಮೀಕಿ ಜಾತ್ರೆ ಮೂಲಕ ಸಮುದಾಯದ ಜಾಗೃತಿ: ಪ್ರಸನ್ನಾನಂದಸ್ವಾಮೀಜಿ



ಚಾಮರಾಜನಗರ, ನಾಡಿನಾದ್ಯಂತ ಇರುವ ವಾಲ್ಮೀಕಿ ಸಮುದಾಯದ ಜನರ ಸಂಘಟನೆಗೆ ಬಲ ತುಂಬುವುದು,ಜಾಗೃತಿ ಮೂಡಿಸುವುದು ವಾಲ್ಮೀಕಿ ಜಾತ್ರೆಯ ಮೂಲ ಉದ್ದೇಶ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಫೆ.8, 9 ಎರಡು ದಿನಗಳ ನಡೆಯುವ ವಾಲ್ಮೀಕಿ ಜಾತ್ರಾ ಮಹೋತ್ಸವ ಜಿಲ್ಲಾ ಮಟ್ಟದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ವಾಲ್ಮೀಕಿ ಜಾತ್ರೆಯು ವೈಚಾರಿಕ ಒಂದು ಜಾತ್ರೆಯಾಗಿದ್ದುಧಾರ್ಮಿಕ ಪ್ರಕ್ರಿಯೆಯಾಗಿದ್ದರೂ ಆ ಮೂಲಕ ಸಮುದಾಯದ ಜನರನ್ನು ಒಂದೆಡೆ ಸೇರಿಸಿ ಸಮಾಲೋಚನೆ, ಜಾಗೃತಿ ಮೂಡಿಸುವ, ಸಂಘಟನೆ ಮಾಡುವ ಉದ್ದೇಶವಿದೆ. ಈ ಬಾರಿ ಜಾತ್ರಾ ಮಹೋತ್ಸವ ಫೆ.8 ಮತ್ತು 9ರಂದು ಗುರುಪೀಠದ ಆವರಣದಲ್ಲಿ ಸಡಗರ, ಸಂಭ್ರಮದಿಂದ ನಡೆಯಲಿದೆ ಎಂದರು.

ಈ ಜಾತ್ರಾ ಮಹೋತ್ಸವ ಸಮುದಾಯ ಜಾಗೃತಿ ವಾಗುತ್ತಿದ್ದು, ಸಂಘಟನೆಯಾಗತ್ತಿದ್ದರೆ ಎಂಬ ಸಂದೇಶ ಕೇಂದ್ರ, ರಾಜ್ಯ ಸರ್ಕಾರ ಹೋಗುತ್ತದೆ. ಹಿಂದುಳಿದ ವಾಲ್ಮೀಕಿ ಸಮುದಾಯವನ್ನು ಮುಖ್ಯವಾಹಿನಿಗೆ ಸೇರಿಸಬೇಕಿದೆ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯವಾಗಿ ಅಭಿವೃದ್ಧಿ ಸಾಧಿಸಬೇಕಿದೆ. ಸರ್ಕಾರದ ಮುಂದೆ ಇನ್ನೂ ಹಲವು ಬೇಡಿಕೆ ಬಾಕಿ ಇವೆ. ಜಾತ್ರೆಯ ಮೂಲಕ ಸಮುದಾಯದ ಜನ ಸರ್ಕಾರದ ಗಮನ ಸೆಳೆಯುವ ಅಗತ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮಠದ ಜಿಲ್ಲಾ ಧರ್ಮದರ್ಶಿ ಹಾಗೂ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಶ್ರೀಮಠಕ್ಕೆ ಸಮುದಾಯದವರು ತನು,ಮನ,ಧನ ನೀಡಿದರೆ ಶ್ರೀಮಠ ಉತ್ತಮವಾಗಿರುತ್ತದೆ. ಜಾತ್ರಾ ಮಹೋತ್ಸವ ಶ್ರೀಮಠದಲ್ಲೇ ಪ್ರತಿವರ್ಷ ಆಚರಣೆ ಮಾಡುವ ಬದಲು ಜಿಲ್ಲೆಗಳಿಗೆ ವಿಸ್ತರಿಸಬೇಕು. ಮುಂದಿನ ವರ್ಷ ಚಾಮರಾಜನಗರ ಜಿಲ್ಲೆಯಲ್ಲಿ ಜಾತ್ರಾಮಹೋತ್ಸವ ಆಚರಣೆ ಮಾಡಿದರೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಜಿ.ಪಂ.ಮಾಜಿ ಸದಸ್ಯರಾದ ಎಸ್.ಸೋಮನಾಯಕ,ಕೊಪ್ಪಾಳಿಮಹದೇವನಾಯಕ, ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್ ಮಾತನಾಡಿದರು. ಸಭೆಯಲ್ಲಿ ನಗರಸಭಾ ಮಾಜಿ ಅಧ್ಯಕ್ಷ ರಾಮಸಮುದ್ರ ಸುರೇಶ್, ತಾಲೂಕು ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ, ಕಪನಿನಾಯಕ, ಯಳಂದೂರು ತಾಲ್ಲೂಕು ಅಧ್ಯಕ್ಷ ರಮೇಶ್, ಮಲ್ಲೇಶ್, ನಗರಸಭಾ ಮಾಜಿ ಸದಸ್ಯ ಚೆಂಗುಮಣಿ, ಕೃಷ್ಣನಾಯಕ, ಕಂಡಕ್ಟರ್ ಸೋಮನಾಯಕ, ಕಂದಹಳ್ಳಿ ಮಹೇಶ್, ಪಾಳ್ಯ ಕೃಷ್ಣನಾಯಕ, ಚಂದ್ರಶೇಖರ್, ಇತರರು ಭಾಗವಹಿಸಿದ್ದರು.

# ರಾಮನಗರದಲ್ಲಿ ಮೈಲಾಡುತೊರೈ, ಒಡೆಯರ್ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಕ್ರಮ

## ರೈಲ್ವೆ ಹಾಗೂ ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಭರವಸೆ

ರಾಮನಗರ: ಇನ್ನೊಂದು ತಿಂಗಳಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ಹಾಗೂ ಮೈಲಾಡುತೊರೈ ಎಕ್ಸ್‌ಪ್ರೆಸ್ ರೈಲುಗಳು ರಾಮನಗರದಲ್ಲಿ ನಿಲ್ಲುಲು ಆದೇಶ ಹೊರಡಿಸಲಾಗುವುದು ಎಂದು ರೈಲ್ವೆ ಹಾಗೂ ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಶುಕ್ರವಾರ ರಾಮನಗರಕ್ಕೆ ಭೇಟಿ ನೀಡಿದ್ದ ಅವರು ರೈಲು ನಿಲ್ದಾಣದಲ್ಲಿ ಅಮೃತ್ ಭಾರತ್ ನಿಲ್ದಾಣ ಕಾಮಗಾರಿಗಳ ಪರಿಶೀಲನೆ ನಡೆಸಿ, ಮಾತನಾಡಿದರು. ಹಲವಾರು ವರ್ಷಗಳಿಂದ ರಾಮನಗರದಲ್ಲಿ ಪ್ರಮುಖ ಎಕ್ಸ್‌ಪ್ರೆಸ್ ರೈಲುಗಳು ರಾಮನಗರದಲ್ಲಿ ನಿಲ್ಲಬೇಕೆಂಬುದು ಸ್ಥಳೀಯರ ಬೇಡಿಕೆಯಾಗಿತ್ತು, ಅದನ್ನು ಅರಿತ ರೈಲ್ವೇ ಇಲಾಖೆ ಜನರ ಬೇಡಿಕೆಯನ್ನು ಇನ್ನೊಂದು ತಿಂಗಳೊಳಗೆ ಈಡೇರಿಸಲಾಗುವುದು. ರಾಮನಗರದ ರೈಲ್ವೇ ಅಂಡರ್‌ಪಾಸ್ ಅಭಿವೃದ್ಧಿಗೆ ಸ್ಥಳೀಯ ಶಾಸಕರು ಬೇಡಿಕೆಯಿಟ್ಟಿದ್ದಾರೆ. ಇದನ್ನು ಸಹ ಆದಷ್ಟು ಬೇಗ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರಾಮನಗರದ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಸಧ್ಯದಲ್ಲೇ ಪೂರ್ಣಗೊಳ್ಳುತ್ತಿದ್ದು, ಒಂದೂವರೆ ತಿಂಗಳಲ್ಲಿ ಲೋಕಾರ್ಪಣೆಗೆ ಸಿದ್ದವಾಗಲಿದೆ ಎಂದರು.

ಬೆಂಗಳೂರಿಗೆ ಹತ್ತಿರವಿರುವ ರಾಮನಗರ, ತುಮಕೂರು ಜಿಲ್ಲೆಗಳು ಶರವೇಗದಲ್ಲಿ ಬೆಳೆಯುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರವು ಸವಲತ್ತುಗಳನ್ನು ನೀಡಲು ಸಿದ್ದವಿದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗ ಒಂದು ನಾಣ್ಯದ ಎರಡು ಮುಖಗಳಾಗಿ ಕೆಲಸ ಮಾಡಿದರೆ ಸಾಧನೆ ಎಂಬ ದಿಕ್ಸೂಚಿಯನ್ನು ಕಾಣಬಹುದು ಎಂದರು.

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ.ಎನ್. ಮಂಜುನಾಥ್, ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಇಕ್ಬಾಲ್ ಹುಸೇನ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷರಾದ ಕೆ.ರಾಜು, ರಾಮನಗರ ನಗರಸಭೆ ಅಧ್ಯಕ್ಷರಾದ ಶೇಷಾದ್ರಿ (ಶಶಿ), ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ನೈರುತ್ಯ ರೇಲ್ವೆಯ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಪರಿಕ್ಷಿತ್ ಮೋಹಲ್ ಪೂರ್ಯ, ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಾಣೇಶ್ ಕೌಲಗಿ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಕೃಷ್ಣ ಚೈತನ್ಯ, ಉಪ ಮುಖ್ಯ ಯೋಜನಾಧಿಕಾರಿ (ಗತಿಶಕ್ತಿ) ಶುಭಂ ಶರ್ಮ, ಹಿರಿಯ ವಿಭಾಗೀಯ ಇಂಜಿನಿಯರ್ ರಾಜೀವ್ ಶರ್ಮ, ಸ್ಟೇಷನ್ ಮಾಸ್ಟರ್ ಕೆ.ಟಿ. ತಗಡಯ್ಯ, ರೈಲ್ವೇ ಇಲಾಖೆ ಅಧಿಕಾರಿ, ಸಿಬ್ಬಂದಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



### ರೈಲು ನಿಲ್ದಾಣ ಶೀಘ್ರದಲ್ಲೇ ಮೇಲರ್ಜೆಗೆ: ವಿ.ಸೋಮಣ್ಣ

ರಾಮನಗರ ರೈಲು ನಿಲ್ದಾಣಕ್ಕೆ ಭೇಟಿ ನೀಡುವ ಮುನ್ನ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಬಿಡದಿ ರೈಲು ನಿಲ್ದಾಣಕ್ಕೆ ಭೇಟಿ ಕೊಟ್ಟಿದ್ದರು. ಈ ವೇಳೆ ಮಾತನಾಡಿದ ಅವರು 2026ರ ಮಾರ್ಚ್ ಅಂತ್ಯದೊಳಗೆ ಬಿಡದಿ ರೈಲು ನಿಲ್ದಾಣವನ್ನು ಆಧುನೀಕರಣಗೊಳಿಸಲು ಒತ್ತು ನೀಡಲಾಗಿದೆ, ರಾಮನಗರ ಹಾಗೂ ಬಿಡದಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಈ ಎರಡು ಪ್ರದೇಶಗಳ ಅಭಿವೃದ್ಧಿಗೊಳಿಸಲು ಆದ್ಯತೆ ನೀಡಲಾಗಿದೆ. ಬೆಂಗಳೂರು ರೈಲು ನಿಲ್ದಾಣದಲ್ಲಿ ರೈಲುಗಳನ್ನು ನಿಲ್ಲಿಸಲು ಸ್ಥಳವಿಲ್ಲ. ಬಿಡದಿ ರೈಲು ನಿಲ್ದಾಣದಲ್ಲಿ ಮೂಲ ಸೌಕರ್ಯ ಒದಗಿಸಿದರೆ ಬೆಂಗಳೂರಿನ ಒತ್ತಡ ಕಡಿಮೆಯಾಗುತ್ತದೆ ಎಂದರು. ಈ ವೇಳೆ ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ.ಬಾಲಕೃಷ್ಣ, ಮಾಜಿ ಶಾಸಕ ಎ. ಮಂಜುನಾಥ್, ಸಂಸದ ಡಾ.ಸಿ.ಎನ್. ಮಂಜುನಾಥ್ ಮತ್ತಿತರರು ಹಾಜರಿದ್ದರು.

### ಹೆಜ್ಜಾಲ-ಚಾ.ನಗರ ರೈಲು ಮಾರ್ಗಕ್ಕೆ ಸ್ಥಳ ಬೇಕು

ಹೆಜ್ಜಾಲದಿಂದ ಚಾಮರಾಜನಗರಕ್ಕೆ 142 ಕಿ.ಮೀ ರೈಲು ಮಾರ್ಗದ ಅಗತ್ಯವಿದೆ. ಹೆಜ್ಜಾಲದಿಂದ ಕಗ್ಗಲೀಪುರ, ಹಾರೋಹಳ್ಳಿ, ಮರಳವಾಡಿ, ಕನಕಪುರ, ಹಲಗೂರು, ಮಳವಳ್ಳಿ, ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ ದವರೆಗೆ ಸುಮಾರು 8 ರಿಂದ 9 ನಿಲ್ದಾಣಗಳು ಬರುತ್ತದೆ. ರಾಜ್ಯದ ಸಚಿವರು ಹಾಗೂ ಸ್ಥಳೀಯ ಶಾಸಕರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಜಾಗ ನೀಡಿದರೆ ಈ ಮಾರ್ಗದಲ್ಲಿ ರೈಲುಗಳನ್ನು ಪ್ರಾರಂಭಿಸಲು ಯೋಜನೆ ರೂಪಿಸಲಾಗುವುದು ಎಂದರು.

## ಪತ್ರಿಕಾ ಛಾಯಾಗ್ರಾಹಕ ಜೆ.ಎಸ್.ಬಸವರಾಜ್‌ಗೆ ಸನ್ಮಾನ



ಕೆ.ಆರ್.ನಗರ: ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ವತಿಯಿಂದ ಪತ್ರಿಕಾ ಛಾಯಾಗ್ರಾಹಕ ಜೆ.ಎಸ್.ಬಸವರಾಜ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಮೂಳೆ ತಜ್ಞ ಡಾ.ಕೆ.ಆರ್.ಗೌತಮ್, ಪತ್ರಕರ್ತ ಕೆ.ಟಿ. ಮೋಹನ್ ಕುಮಾರ್, ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್, ಉಪಾಧ್ಯಕ್ಷೆ ಭಾಗ್ಯ, ನಿರ್ದೇಶಕರಾದ ಎಂ.ಎಸ್.ನರಸಿಂಹ, ಮಂಜುನಾಥ, ಶಶಿಕುಮಾರ್, ನೇತ್ರಾವತಿ, ಅಶ್ವಿನಿ, ಅವಿನಾಶ್, ಸಿಇಓ ಸಿಂಧು, ಸಿಬ್ಬಂದಿ ಮಮತಾ, ವಕೀಲ ಸ್ಪಿನ್ ಕೃಷ್ಣ, ಬಸವರಾಜು, ಮುಖಂಡರಾದ ನವೀನ್, ಸುರೇಶ, ಗುರುರಾಜ್, ರೇಣುಕೇಶ್ ಇತರರು ಇದ್ದರು.

## ಕನ್ನಡ ಚಳವಳಿ ಕೇಂದ್ರದಿಂದ ಸಾಧಕರಿಗೆ ಸನ್ಮಾನ

ಮೈಸೂರು: ಕನ್ನಡ ಚಳುವಳಿ ಕೇಂದ್ರ ಸಮಿತಿ ಮೈಸೂರು ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ ರಾಜಣ್ಣ, ಸಮಾಜಸೇವಕರಾದ ಯಶಸ್ವಿ.ಎಸ್.ಸೋಮಶೇಖರ್, ಜೈಶಂಕರ್, ಶಿಕ್ಷಣ ಕ್ಷೇತ್ರ ಡಾ.ಎಂ.ಪುಟ್ಟಸ್ವಾಮಿ, ವಕೀಲ ಯಶ್ವಂತ್ ಅವರನ್ನು ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿದರು.

ನಗರದ ನಟರಾಜ ಸಭಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ನಾಡಿಗೆ ತನ್ನದೇ ಆದ ಹಿರಿಮೆಯಿದೆ. ಕನ್ನಡ ನಾಡಿನ ಉಳಿವಿಗೆ ಹೋರಾಡಿದವರನ್ನು ನೆನೆಯುವುದೇ ಕನ್ನಡ ರಾಜ್ಯೋತ್ಸವ. ಕನ್ನಡದ ಹಲವಾರು ಮಹಾನೀಯರ ಆದರ್ಶಗಳನ್ನು ಕನ್ನಡಿಗರು ಅಳವಡಿಸಿಕೊಳ್ಳಬೇಕು. ಆ ಮೂಲಕ ನಾಡು, ನುಡಿ, ಜಲ ಕನ್ನಡಿಗರ ರಕ್ಷಣೆಯನ್ನು ಮಾಡುವಂತಹ ಗುರಿಯನ್ನು ನಾವೆಲ್ಲರೂ ಸ್ವೀಕಾರ ಮಾಡಬೇಕಿದೆ. ಕನ್ನಡಿಗರೆಲ್ಲರೂ ಒಟ್ಟಾಗಿ ನಾಡಿಗಾಗಿ ದುಡಿದು, ಭಾಷೆಯನ್ನು ಬೆಳೆಸುವ ಕೆಲಸ ಮಾಡೋಣ. ಕನ್ನಡಕ್ಕೆ 2500ಕ್ಕೂ ಹೆಚ್ಚಿನ ಇತಿಹಾಸವಿರುವ ಪ್ರಾಚೀನ ಭಾಷೆ ಕನ್ನಡ. ಪಂಪ, ಜನ್ನ, ರನ್ನರಿಂದ ಹಿಡಿದು, ಬೇಂದ್ರೆ, ಕುವೆಂಪು ಅವರವರೆಗೂ ಸಾವಿರಾರು ಸಾಹಿತಿಗಳು, ಹೋರಾಟಗಾರರು ಕನ್ನಡಕ್ಕಾಗಿ ದುಡಿದು ಸೇವೆ ಸಲ್ಲಿಸಿದ್ದಾರೆ. ಪ್ರಪಂಚದಲ್ಲಿ ಯಾವ ಭಾಷೆಗೂ ಇಲ್ಲದ ಶಕ್ತಿ ಕನ್ನಡಕ್ಕಿದೆ ಎಂದರು.



ಕನ್ನಡ ನಾಡಿನಲ್ಲಿ ಹಲವಾರು ಮಹಾನೀಯರು ಸಾಹಿತಿಗಳು ಕನ್ನಡ ನಾಡಿನವರಲ್ಲದಿದ್ದರೂ ಕನ್ನಡಕ್ಕೆ ನಿಶ್ಕಲ್ಮಷದಿಂದ ಹಲವಾರು ಸೇವೆ ಸಲ್ಲಿಸಿದ್ದಾರೆ. ಆದರೆ ಹಲವು ಕನ್ನಡಿಗರೆ ಕನ್ನಡವನ್ನು ಮರೆಯುತ್ತಿದ್ದಾರೆ, ತೋರಿಕೆ ಪ್ರೇಮ ತೋರುತ್ತಿದ್ದಾರೆ. ಕನ್ನಡ ರಾಜ್ಯೋತ್ಸವಕ್ಕಿಂತ ಯಾವಾಗಲು ನಿತ್ಯೋತ್ಸವವಾಗಬೇಕಿದೆ ಅಭಿಪ್ರಾಯಿಸಿದರು. ನಟರಾಜ ಶಿಕ್ಷಣ ಸಂಸ್ಥೆಗಳು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಗಾಯಕ ಗೋಪಿ, ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಉಸ್ಥಿತರಿದ್ದರು

ವರ್ತಮಾನ
ಜಾಹಿರಾತಿಗೆ
ಉತ್ತಮ
ಮಾಧ್ಯಮ

### ಮಾಜಿ ಮಹಾಪೌರ ಬಿ.ಎಲ್.ಭೈರಪ್ಪ ಆಗ್ರಹ

## ಪ್ರಸಾದ್ ಯೋಜನೆ ಸ್ಪಷ್ಟಪಡಿಸುವಂತೆ ಆಗ್ರಹ

ಮೈಸೂರು: ರಾಜಕಾರಣಿಗಳಿಂದಲೇ ಚಾಮುಂಡಿ ಬೆಟ್ಟ ನಾಶವಾಗುತ್ತಿದ್ದು, ಚಾಮುಂಡಿ ಬೆಟ್ಟದಲ್ಲಿ ಪ್ರಸಾದ್ ಯೋಜನೆಯ ಮಾಹಿತಿ ತಿಳಿಸಿಕೊಟ್ಟು ಬಳಿಕವಷ್ಟೇ ಕಾಮಗಾರಿಗೆ ಮುಂದಾಗಬೇಕು. ಯಾವುದೇ ಕಾರಣಕ್ಕೂ ಚಾಮುಂಡಿ ಬೆಟ್ಟದ ಪರಿಸರಕ್ಕೆ ಹಾನಿಯಾಗುವ ಯೋಜನೆಯನ್ನು ಜಾರಿಗೊಳಿಸಲು ಬಿಡುವುದಿಲ್ಲ ಎಂದು ಮಾಜಿ ಮಹಾಪೌರ ಬಿ.ಎಲ್.ಭೈರಪ್ಪ ಆಗ್ರಹಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 100 ಕೋಟಿ ರೂ. ವೆಚ್ಚದ ಪ್ರಸಾದ್ ಯೋಜನೆ ಘೋಷಣೆಯಾದಾಗ ಅದರಲ್ಲಿ ರೋಪ್ ವೇ ಗೆ ವಿರೋಧ ವ್ಯಕ್ತವಾಗಿ ಅದನ್ನು ಕೈಬಿಡಲಾಯಿತು. ಅದರಿಂದ ಅನುದಾನ ಕಡಿತವಾಗಿ 45 ಕೋಟಿ ರೂ. ಮಾತ್ರವಾಯಿತು. ಈಗ ಚಾಮುಂಡಿ ಬೆಟ್ಟದ ಪಾದದ ಬಳಿ, ಮಹಿಷಾಸುರ ಪ್ರತಿಮೆ, ನಂದಿ ವಿಗ್ರಹದ ಬಳಿ ಕಾಮಗಾರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಚಾಮುಂಡಿ ಬೆಟ್ಟದ ಮೇಲೆ ಹಾಗೂ ಪಾದದ ಸಮೀಪ ಎಲ್ಲೆಡೆ ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡು ಸರ್ಕಾರಿ ಜಾಗವೇ ಇಲ್ಲದಂತಾಗಿದೆ. ಹೀಗಿರುವಾಗ ಸರ್ಕಾರ ಯಾವ ಜಾಗದಲ್ಲಿ ಹೊಸ ಯೋಜನೆಗಳನ್ನು ಮಾಡಲು ಹೊರಟಿದೆ ಎಂಬುದು ಸ್ಪಷ್ಟಪಡಿಸಬೇಕು. ಏನೇನೂ ಮಾಡುತ್ತಾರೆಂಬುದನ್ನು ಜನರಿಗೆ ತಿಳಿಸಿ ಅನಂತರ ಪ್ರಾರಂಭಿಸಬೇಕೆಂದು ಆಗ್ರಹಿಸಿದರು.




ಸರ್ಕಾರಿ ಅಧಿಕಾರಿಗಳು ಆತುರದಲ್ಲಿ ಯೂನಿಟಿ ಮಾಲ್ ಚಾಲನೆ ನೀಡಿದರು. ಈಗ ಅದು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಸ್ಥಗಿತವಾಗಿದೆ. ಹೀಗೆ ಚಾಮುಂಡಿ ಬೆಟ್ಟದ ಪ್ರಸಾದ್ ಯೋಜನೆ ಆಗಬಾರದು. ಪ್ರಾಧಿಕಾರ ರಚನೆ ನಂತರ 35 ಮನೆಗಳು ನಿರ್ಮಾಣವಾಗಿದೆ. ಯುಜಿಡಿ ವ್ಯವಸ್ಥೆಯಿಲ್ಲದಿರುವ ಕಾರಣಕ್ಕೆ ಮಲೀನ ನೀರು ಕುಸಿಯುವ ಆಂತಕದಲ್ಲಿದೆ. ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ದೇವಿಕೆರೆ ಅಭಿವೃದ್ಧಿ ಸೇರಿ ಅನೇಕ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಹೀಗಾಗಿ ಅನೇಕ ರಾಜಕಾರಣಿಗಳ ಮನಸೋ ಇಚ್ಛೆ ಕಾಮಗಾರಿಯಿಂದಲೇ ಬೆಟ್ಟ ಅದ್ವಾನವಾಗಿದೆ. ಹೀಗಾಗಿ ವ್ಯವಸ್ಥಿತವಾಗಿ ಯೋಜನೆ ರೂಪಿಸಿ ಜನರೊಟ್ಟಿಗೆ ಚರ್ಚಿಸಬೇಕು. ಇದೆಲ್ಲವನ್ನೂ ಮುಖ್ಯಮಂತ್ರಿಗಳಿಗೆ ತಿಳಯಪಡಿಸಿ ಬೆಟ್ಟವನ್ನು ಉಳಿಸಿಕೊಂಡು ಅಭಿವೃದ್ಧಿ ಪಡಿಸುವ ಕೆಲಸ ಆಗಬೇಕಿದೆ ಎಂದರು.

ನಮ್ಮ ಸಲಹೆಯನ್ನು ಮೀರಿ ಸರ್ಕಾರಿ ಅಧಿಕಾರಿಗಳು ಅವೈಜ್ಞಾನಿಕ ಯೋಜನೆಗಳ ಜಾರಿಗೆ ಮುಂದಾದರೆ ಜನವರಿಯಲ್ಲಿ ಜನರನ್ನು ಸೇರಿಸಿಕೊಂಡು ಬೆಟ್ಟವನ್ನು ಉಳಿಸಲು ಹೋರಾಟ ರೂಪಿಸುವ ಕೆಲಸ ಮಾಡಲಾಗುವುದು. ಯಾವುದೇ ರಾಜಕಾರಣಿಗಳಿಗೂ ಬೆಟ್ಟವನ್ನು ಉಳಿಸುವ ಇಚ್ಛಾಶಕ್ತಿ ಇಲ್ಲವಾಗಿದೆ. ಇದಕ್ಕೆ ಹಲವು ವರ್ಷಗಳಿಂದ ಕುಂಟುತ್ತಾ ಸಾಗಿರುವ ನಂದಿದಾರಿಯ ಕೆಲಸವೇ ಸಾಕ್ಷಿಯಾಗಿದೆ ಎಂದರು. ಗೋಷ್ಠಿಯಲ್ಲಿ ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

### ಕೃಷ್ಣಮೃಗಗಳ ಬೇಟೆ: ತನಿಖೆಗೆ ಖಂಡ್ರೆ ಸೂಚನೆ



**ಚಿಕ್ಕಮಗಳೂರು:** ಕಡೂರು ತಾಲೂಕಿನ ಬೀರೂರು ಸಮೀಪದ ಬಾಸೂರು ಕಾವಲಿನ ಕೃಷ್ಣಮೃಗಗಳ ಮೀಸಲು ಸಂರಕ್ಷಿತ ಪ್ರದೇಶದಲ್ಲಿ ನಡೆ ದಿರುವ ಮೂರು ಕೃಷ್ಣಮೃಗಗಳ ಬೇಟೆ ಪ್ರಕರಣದ ತನಿಖೆಗೆ ಸರ್ಕಾರ ಆದೇಶಿಸಿದೆ.

ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ಎರಡು ಹೆಣ್ಣು ಹಾಗೂ ಒಂದು ಗಂಡು ಕೃಷ್ಣಮೃಗಗಳನ್ನು ಬೇಟೆ ಮಾಡಲಾಗಿತ್ತು. ಪ್ರಕರಣಕ್ಕೆ ಸಂಬಂ ಧಿಸಿದಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಏಳು ದಿನದೊಳಗೆ ಘಟನೆಯ ಸಂಪೂರ್ಣ ವರದಿ ಸಲ್ಲಿಸುವಂತೆ ಸೂಚಿಸಿದರು. ಪ್ರಕರಣ ದಲ್ಲಿ ಅಧಿಕಾರಿಗಳ ನಡೆ ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ. ಪ್ರಕರಣವನ್ನು ಮುಚ್ಚಿ ಹಾಕುವ ಯತ್ನ ನಡೆಯುತ್ತಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿತ್ತು.

# ಅದ್ದೂರಿ ಹನುಮಜಯಂತೋತ್ಸವ



ಚಾಮರಾಜನಗರ: ನಗರದ ಶ್ರೀಹನುಮ ಜಯಂತೋತ್ಸವ ಚಾಮರಾಜನಗರ ಜಿಲ್ಲಾ ಸಮಿತಿವತಿಯಿಂದ ಜಿಲ್ಲಾಕೇಂದ್ರ ಚಾಮರಾಜನಗರದಲ್ಲಿ ಡಿ. 27ರಂದು ಮಧ್ಯಾಹ್ನ 3ಕ್ಕೆ ಹನುಮಜಯಂತಿ ಅಂಗವಾಗಿ 4ನೇ ವರ್ಷದ ಶ್ರೀರಾಮ ಹಾಗೂ ಆಂಜನೇಯಸ್ವಾಮಿ ವಿಗ್ರಹಗಳ ವಿಜೃಂಭಣೆಯ ಮೆರವಣಗೆ ಆಯೋಜಿಸಲಾಗಿದೆ ಎಂದು ಶ್ರೀಹನುಮಜಯಂತೋತ್ಸವ ಚಾಮರಾಜನಗರ ಜಿಲ್ಲಾ ಸಮಿತಿ ಉಪಾಧ್ಯಕ್ಷ ಹರ್ಷದ್‌ಗೌಡ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ ನಗರದ ಹಳೇಖಾಸಗಿ ಬಸ್ ನಿಲ್ದಾಣದಲ್ಲಿರುವ ಅಭಯಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಹೋಮಹವನ ಪೂಜಾಕಾರ್ಯಕ್ರಮಗಳು ಜರುಗಲಿವೆ, ಮಧ್ಯಾಹ್ನ 3ಕ್ಕೆ ನಗರದ ಮಾರಿಗುಡಿ ಆವರಣದಲ್ಲಿ ಶ್ರೀರಾಮ ಹಾಗೂ ಆಂಜನೇಯಸ್ವಾಮಿ ವಿಗ್ರಹಗಳಿಗೆ ಪುಷ್ಪಾರ್ಚನೆ ನೆರವೇರಿಸಲಾಗುತ್ತದೆ. ನಂತರ ಮೆರವಣ ಗೆಗೆ ಚಾಲನೆ ನೀಡಲಾಗುತ್ತದೆ ಎಂದರು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣ ಗೆ ಸಾಗಲಿದ್ದು, ಜನರಿಗೆ ಮನರಂಜನೆ ನೀಡಲು 10ಕ್ಕು ಹೆಚ್ಚುಕಲಾತಂಡಗಳು ಭಾಗವಹಿಸಲಿವೆ.ಮೆರವಣ ಗೆ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯಲಿದೆ. ಸಂಘಸಂಸ್ಥೆಗಳ ಮುಖಂಡರು, ಹಿಂದೂಸಂಘಟನೆಗಳು, ಎಲ್ಲ ಸಮುದಾಯಗಳ ಯಜಮಾನರು ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಿ, ಹನುಮಜಯಂತೋತ್ಸವ ಮೆರವಣಗೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಹನುಮ ಜಯಂತೋತ್ಸವ ಸಮಿತಿ ಜಿಲ್ಲಾಧ್ಯಕ್ಷ ರಾಜೇಂದ್ರ, ಪ್ರಧಾನಕಾರ್ಯದರ್ಶಿ ಪುಟ್ಟರಾಜು, ಸದಸ್ಯರಾದ ಮನು, ಮಧು, ಶಿವು,ಸಂಚಾಲಕ ಪ್ರವೀಣ್ ಹಾಜರಿದ್ದರು.

# ರಸ್ತೆಯಲ್ಲಿ ರಾಗಿ ಒಕ್ಕಣೆ ಕಾರು ಮಗುಚಿ ಬಿದ್ದ ಪರಿಣಾಮ ಕಾರು ಚಾಲಕ ಸ್ಥಳದಲ್ಲಿಯೇ ಸಾವು





ಕೆ.ಆರ್.ಪೇಟೆ, ರಸ್ತೆಯಲ್ಲಿ ರಾಗಿ ಒಕ್ಕಣೆ ಮಾಡುತ್ತಿದ್ದ ಸಂದರ್ಭದಲ್ಲಿ ರಾಗಿಯ ಮೇಲೆ ಕಾರು ಚಲಿಸಿದಾಗ ಕಾರು ಮಗುಚಿ ಬಿದ್ದ ಪರಿಣಾಮ ಕಾರು ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಣ್ಣೇನಹಳ್ಳಿ ಕೈಗಾರಿಕಾ ಪ್ರದೇಶದ ಬೂಕನಕೆರೆ–ಡಿಂಕಾ–ಅಶೋಕನಗರ ಮಾರ್ಗದ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಪಿ.ಬಿ.ಮಂಚನಹಳ್ಳಿ ಗ್ರಾಮದ ನಿವಾಸಿ ಪ್ರಜ್ವಲ್(19) ಮೃತ ಯುವಕನಾಗಿದ್ದಾರೆ. ಅದೇ ಕಾರಿನಲ್ಲಿ ಹೋಗುತ್ತಿದ್ದ ಪ್ರಜ್ವಲ್ ಸಂಬಂಧಿ ಕಾವ್ಯ(26) ಎಂಬುವವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ.

**ಘಟನೆ ವಿವರ**

ಕಳೆದ ಒಂದು ತಿಂಗಳಿನಿಂದಲೂ ಈ ರಸ್ತೆಯಲ್ಲಿ ರೈತರು ನಿತ್ಯ ರಸ್ತೆಯಲ್ಲಿ ರಾಗಿ ಹುಲ್ಲು ಹಾಕಿ ಒಕ್ಕಣೆ ಮಾಡುತ್ತಿದ್ದರು. ಈ ಬಗ್ಗೆ ಹಲವು ಅಪಘಾತಗಳು ನಡೆದಿದ್ದರೂ ಸಹ ಪೊಲೀಸ್ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ರಾಗಿ ಒಕ್ಕಣೆ ಮಾಡುವುದು ನಿರಂತರವಾಗಿ ನಡೆಯುತ್ತಿತ್ತು. ಇಂದೂ ಸಹ ಹಲವು ರೈತರು ರಸ್ತೆಯಲ್ಲಿ ರಾಗಿ ಹುಲ್ಲು ಹರಡಿ ಒಕ್ಕಣೆ ಮಾಡುತ್ತಿದ್ದ ಕಾರಣ ಮೃತ ಪ್ರಜ್ವಲ್ ಕಾರನ್ನು ಓಡಿಸಿಕೊಂಡು ಬರುತ್ತಿದ್ದಾಗ, ಚಾಲಕನ ನಿಯಂತ್ರಣ ತಪ್ಪಿದ ಕಾರು ಮಗುಚಿ ಬಿದ್ದಿದೆ. ಪರಿಣಾಮ ಪ್ರಜ್ವಲ್ ಅವರಿಗೆ ಗಂಭೀರವಾದ ಗಾಯಗಳುಂಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಪ್ರಜ್ವಲ್ ಹತ್ತಿರದ ಸಂಬಂಧಿ ಕಾವ್ಯ ಅವರಿಗೆ ಗಂಭೀರವಾದ ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಟ ಮಾಡುತ್ತಿದ್ದಾರೆ. ಘಟನಾ ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಇನ್ಸ್ಪೆಕ್ಟರ್ ಆನಂದೇಗೌಡ ಬೇಟಿ ನೀಡಿ ಪರಿಶೀಲನೆ ನಡೆಸಿ ರಾಗಿ ಒಕ್ಕಣೆ ಮಾಡುತ್ತಿದ್ದ ಹಲವು ರೈತರ ಮೇಲೆ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ. ನಾಳೆಯಿಂದ ಯಾರಾದರೂ ರಸ್ತೆಯಲ್ಲಿ ಒಕ್ಕಣೆ ಮಾಡಿದರೆ ಸಾರ್ವಜನಿಕರು ಮಾಹಿತಿ ನೀಡಿದ್ದಲ್ಲಿ ತಕ್ಷಣ ಒಕ್ಕಣೆ ಮಾಡುವ ರೈತರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಿಪಿಐ ಆನಂದೇಗೌಡ ಸುದ್ದಿಗಾರರೊಂದಿಗೆ ಮಾತನಾಡಿ ಎಚ್ಚರಿಕೆ ನೀಡಿದ್ದಾರೆ.

# ಹಕ್ಕುಪತ್ರ ನೀಡುವಂತೆ ಆದಿವಾಸಿಗಳ ಆಗ್ರಹ

## ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಮನವಿ ಪತ್ರ ಸಲ್ಲಿಸಿ, ಪ್ರತಿಭಟನೆ



ಎಚ್.ಡಿ.ಕೋಟೆ: ತಲತಲಾಂತರ ಗಳಿಂದ ವ್ಯವಸಾಯ ಮಾಡಿಕೊಂಡು ಅನುಭೋಗದಲ್ಲಿರುವ ಜಮೀನಿಗೆ ಅರಣ್ಯ ಹಕ್ಕು ಪತ್ರ ನೀಡಬೇಕೆಂದು ಒತ್ತಾಯಿಸಿ ತಾಲೂಕಿನ ಅಂತರಸಂತೆ ಹೋಬಳಿ ಡಿ.ಬಿ ಕುಪ್ಪೆ ಗ್ರಾ.ಪಂ ವ್ಯಾಪ್ತಿಗೆ ಬರುವ ಡಿ.ಬಿ ಕುಪ್ಪೆ, ಗೋಳೂರು, ಮಚ್ಚೂರು ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳ ಆದಿವಾಸಿಗಳು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಡಿ.ಬಿ.ಕುಪ್ಪೆ ಗ್ರಾ.ಪಂ ವ್ಯಾಪ್ತಿಯಲ್ಲಿ 26 ಗ್ರಾಮ ಹಾಗೂ ಹಾಡಿಗಳಿದ್ದು, ಹಲವು ದಶಕಗಳಿಂದಲೂ ಅರಣ್ಯ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆ 2006 ಅಡಿ ಸಲ್ಲಿಸಿರುವ ವೈಯಕ್ತಿಕ 371 ಅರ್ಜಿಗಳನ್ನು ಉಪವಿಭಾಗ ಮಟ್ಟ ಪುರಸ್ಕರಿಸಿ, ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸು ಮಾಡಿದೆ. ಈ ಸಂಬಂಧ ಎರಡು ಬಾರಿ ಜಿಲ್ಲಾಧಿಕಾರಿ ಹಾಗೂ ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಸಭೆ ಕೂಡ ನಡೆದಿದೆ. ಆದರೆ, ಇಲ್ಲಿಯವರೆಗೆ ಅರ್ಜಿ ಪುರಸ್ಕರಿಸಿ ಹಕ್ಕು ಪತ್ರ ನೀಡಿಲ್ಲ. ವಂಶವೃಕ್ಷ ಪ್ರಮಾಣ ಪತ್ರ ನೆಪವೊಡ್ಡಿ ಅರಣ್ಯ ಹಕ್ಕು ಪತ್ರ ನೀಡಲು ಈಗಿನ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ. ಈ ಹಿಂದೆ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆಯೇ ಅರ್ಜಿಗಳನ್ನು ಪುರಸ್ಕರಿಸಿ, ತುರ್ತಾಗಿ 371 ಅರ್ಜಿಗಳನ್ನು ಅನುಷ್ಠಾನಗೊಳಿಸಬೇಕಂದು ಆದಿವಾಸಿಗಳು ತಹಸಿಲ್ದಾರ್ ಕಚೇರಿಗೆ ಆಗಮಿಸಿ ಶಾಸಕ ಅನಿಲ್ ಚಿಕ್ಕಮಾದು ಹಾಗೂ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಮಾಡಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಅರ್ಜಿಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿ ಆದಷ್ಟು ಬೇಗ ಅರ್ಜಿಗಳ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಎರಡು ಬಾರಿ ಸಭೆ ನಡೆಸಿದ್ದೇವೆ. ಅಗತ್ಯಬಿದ್ದರೆ ಜ.2ರ ಬಳಿಕ ಮತ್ತೊಂದು ಬಾರಿ ನಿಮ್ಮ ಜೊತೆಯೂ ಸಭೆ ನಡೆಸಿ, ಸಮಸ್ಯೆಗಳ ಬಗೆಹರಿಸುವುದಾಗಿ ಭರವಸೆ ನೀಡಿದರು. ಶೈಲೇಂದ್ರ, ಬಿ ಸಿದ್ದರಾಜು, ಪುಟ್ಟಬಸವಯ್ಯ, ವೆಂಕಟೇಶ್ ಮೂರ್ತಿ, ದಾಸಪ್ಪ, ಜಯ, ವೆಂಕಟೇಗೌಡ, ಕೃಷ್ಣ, ದಾಸೇಗೌಡ, ಮಣಿ, ಗೋವಿಂದರಾಜು, ಪುರುಷೋತ್ತಮ, ಶಿವರಾಜು, ಭಾಗ್ಯ, ಶಿವರಾಜು, ಯಶೋಧ, ರತ್ನಮ್ಮ, ರುಕ್ಮಿಣಿ, ಪಾರ್ವತಿ ಸೇರಿದಂತೆ ಗ್ರಾಮಸ್ಥರು ಇದ್ದರು.

### ಬಳ್ಳೆಯಲ್ಲಿ ಪ್ರತಿಭಟನೆಗೆ ನಿರ್ಧಾರ

**ಈ ಹಿಂದಿನ ಮೈಸೂರು ಜಿಲ್ಲಾಧಿಕಾರಿ ಇದೇ ದಾಖಲೆಗಳ ಆಧಾರದ ಮೇಲೆಯೇ ಡಿಬಿ ಕುಪ್ಪೆ ಭಾಗದಲ್ಲಿ 244 ಅರ್ಜಿ ಪುರಸ್ಕರಿಸಿ ಅರಣ್ಯ ಹಕ್ಕು ಪತ್ರ ನೀಡಿದ್ದರು. ಆದರೆ ಈಗಿರುವ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಇಲ್ಲಿಯವರೆಗೆ ಒಂದೇ ಒಂದು ಹಕ್ಕುಪತ್ರ ವಿತರಣೆ ಮಾಡಿಲ್ಲ. ಕೇಳಲು ಹೋದರೆ ವಂಶವೃಕ್ಷ ಪ್ರಮಾಣ ಪತ್ರ ನೀಡುವಂತೆ ಕೇಳುತ್ತಿದ್ದಾರೆ. ಅರಣ್ಯ ಇಲಾಖೆ ಪ್ರತಿಯೊಂದಕ್ಕೂ ಅಡ್ಡಿ ಮಾಡುತ್ತಲೇ ಬರುತ್ತಿದೆ. ಹಕ್ಕು ಪತ್ರ ಪಡೆಯಲು ವಂಶವೃಕ್ಷ ಅಗತ್ಯವಿಲ್ಲ. ಹಿರಿಯರ ಹೇಳಿಕೆ ಮತ್ತು ಗುರುತಿನ ಚೀಟಿ ಸಲ್ಲಿಸಿದ್ದರಷ್ಟೇ ಸಾಕು. ಆದರೆ ಅರಣ್ಯ ಇಲಾಖೆ ಅಧಿಕಾರಿಗಳ ಕುಮ್ಮಕ್ಕಿನಿಂದ ಈಗ ವಂಶವೃಕ್ಷ ಪ್ರಮಾಣ ಪತ್ರ ಕೇಳುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ. 15 ದಿನದೊಳಗೆ ಅರ್ಜಿಗಳನ್ನು ಅನುಷ್ಠಾನಗೊಳಿಸದಿದ್ದರೆ ಬಳ್ಳೆಯಲ್ಲಿ ಉಗ್ರ ಹೋರಾಟ ಮಾಡುತ್ತೇವೆ ಎಂದು ಗ್ರಾಮಸ್ಥರು ಹಾಗೂ ಡಿ.ಬಿ.ಕುಪ್ಪೆ ಗ್ರಾ.ಪಂ ಅಧ್ಯಕ್ಷ ಸುಬ್ರಮಣ್ಯಸ್ವಾಮಿ ಸೇರಿದಂತೆ ಅನೇಕರು ನಿರ್ಧಾರ ಕೈಗೊಂಡಿದ್ದಾರೆ.**

**ಅರಣ್ಯ ಹಕ್ಕು ಕಾಯ್ದೆ ಅಡಿ ಅರಣ್ಯ ಹಕ್ಕು ಪತ್ರ ನೀಡುವಂತೆ ಡಿಬಿ ಕುಪ್ಪೆ ಗ್ರಾಮಸ್ಥರು ನಮಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆದು ಅರಣ್ಯ ಹಕ್ಕು ಪತ್ರ ಕೊಡಲು ತೀರ್ಮಾನಿಸಲಾಗಿದೆ. ಆದರೆ, ಕೆಲವರು ವಂಶವೃಕ್ಷ ಪ್ರಮಾಣ ಪತ್ರ ನೀಡದೆ ಇರುವುದರಿಂದ ಅರಣ್ಯ ಹಕ್ಕು ಪತ್ರ ನೀಡಲು ವಿಳಂಬವಾಗಿದೆ. ಕೆಲವರು ವಂಶವೃಕ್ಷ ಪ್ರಮಾಣ ಪತ್ರ ನೀಡಲು ಈಗ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಅಂತವರಿಗೆ ನಾವೇ ಅರ್ಜಿ ಹಾಕಿಸಿ, ವಂಶವೃಕ್ಷ ಪ್ರಮಾಣ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು, 15 ದಿನಗಳಲ್ಲಿ ಸಮಸ್ಯೆ ಬಗೆಹರಿಸಿ ಹಕ್ಕು ಪತ್ರ ನೀಡಲು ಕ್ರಮಕೈಗೊಳ್ಳಲಾಗುವುದು**

**–ಶ್ರೀನಿವಾಸ್**
ಹೆಚ್.ಡಿ.ಕೋಟೆ ತಹಸಿಲ್ದಾರ್




ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಕನ್ನಡ ವಿರೋಧಿಗಳಿಗೆ ಏಕೆ ಪ್ರೋತ್ಸಾಹ?; ಮುಖ್ಯಮಂತ್ರಿ ಚಂದ್ರು ಟೀಕೆ

ಮೈಸೂರು: ಈಚಿನ ಕನ್ನಡ ಸಿನಿಮಾಗಳ ಶೀರ್ಷಿಕೆಗಳು ಕನ್ನಡದಲ್ಲಿ ಇರುವುದಿಲ್ಲ. ಇಂಥ ಕನ್ನಡ ವಿರೋಧಿಗಳಿಗೆ ಯಾಕೆ ಪ್ರೋತ್ಸಾಹ ನೀಡಬೇಕು? ಎಂದು ರಂಗಭೂಮಿ, ಸಿನಿಮಾ ನಟ ಮುಖ್ಯಮಂತ್ರಿ ಚಂದ್ರು ಪ್ರಶ್ನಿಸಿದರು.

ಮೈಸೂರು– ಗದ್ದಿಗೆ ರಸ್ತೆಯ ಆಲನಹಳ್ಳಿಯಲ್ಲಿ ಗುರುವಾರ ಜನಪರ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ, ಮನೆಮನೆ ಕವಿಗೋಷ್ಠಿ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರೊಂದಿಗೆ ಶ್ರೀಕೃಷ್ಣ ಆಲನಹಳ್ಳಿ ರಾಜ್ಯಮಟ್ಟದ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿ, ಡೆವಿಲ್, ಮಾರ್ಕ್, 45 ಈ ರೀತಿಯ ಹೆಸರುಗಳಿರುತ್ತವೆ. ನಟರು ಕನ್ನಡ ನಾಡು–ನುಡಿಗೆ ಹೋರಾಡಲಿ. ಕನ್ನಡದಲ್ಲಿ ನಾಮಫಲಕಗಳಿರುವ ಹಾಗೆ ನೋಡಿಕೊಳ್ಳಿ. ಜನರ ಪ್ರೀತಿ, ವಿಶ್ವಾಸ ಗಳಿಸಿಕೊಳ್ಳಿ. ಇದಕ್ಕಾಗಿ ವರನಟ ಡಾ. ರಾಜಕುಮಾರ್ ಅವರನ್ನು ಮಾದರಿಯಾಗಿಟ್ಟುಕೊಳ್ಳಿ. ನಡವಳಿಕೆ ಮುಖ್ಯ, ಹಣಗಳಿಕೆ ಮುಖ್ಯವಲ್ಲ ಎಂದು ಅರಿಯಿರಿ. ಸ್ನೇಹ, ಸೌಹಾರ್ದದಿಂದ ಎಲ್ಲರೊಂದಿಗೆ ನಟರು ಇರಬೇಕು. ಹಾಗೆಯೇ ಸ್ಪರ್ಧೆಗಿಳಿದಂತೆ ಕನ್ನಡ ಸಿನಿಮಾಗಳನ್ನು ಬಿಡುಗಡೆ ಮಾಡಬೇಡಿ. ಆಗ ಕನ್ನಡ ಸಿನಿಮಾಗಳು ಹೆಚ್ಚು ದಿನಗಳು ಓಡುತ್ತವೆ ಎಂದು ಅವರು ಸಲಹೆ ನೀಡಿದರು.

ಸಮಾರಂಭವನ್ನು ಉದ್ಘಾ?ಟಿಸಿದ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು, ವಿಧಾನ ಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿದರು. ನಂತರ ಮೈಸೂರು ಆನಂದ್ ಅವರು ಹಾಸ್ಯ ಚಟಾಕಿಗಳನ್ನು ಹೇಳಿ ನಗಿಸಿದರು. ಕನ್ನಡ ಉಪನ್ಯಾ?ಸಕಿ ಡಾ.ಎಂ.ಎಸ್.ಅನಿತಾ, ಮುಖ್ಯ ಅತಿಥಿಯಾಗಿದ್ದ ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯ ನಿರ್ದೇಶಕ ಎಂ.ಚಂದ್ರಶೇಖರ್, ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾ?ಧ್ಯಕ್ಷ ಡಾ.ಎಂ.ಮಹೇಶ ಚಿಕ್ಕಲ್ಲೂರು, ರಾಜ್ಯ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ರಾಜ್ಯ ನಿರ್ದೇಶಕ ವೀರಭದ್ರಸ್ವಾಮಿ, ಆಮ್ ಆದ್ಮಿ ಪಾರ್ಟಿ ಮುಖಂಡರಾದ ರಂಗಯ್ಯ, ಕುಲಕರ್ಣಿ, ಪದ್ಮಾ ಮುಖ್ಯಮಂತ್ರಿ ಚಂದ್ರು, ಸಿಪಿಐಗಳಾದ ಮಹದೇಶ್ವರ ಬೆಟ್ಟದ ಜಗದೀಶ, ಸಾಲಿಗ್ರಾಮದ ಶಶಿಕುಮಾರ್, ಕೆ.ಆರ್. ನಗರದ ಶಿವಪ್ರಕಾಶ್, ಉಪನ್ಯಾಸಕರಾದ ಆಲನಹಳ್ಳಿ ಸೋಮಣ್ಣ, ಚೇತನ ವಿದ್ಯಾಸಂಸ್ಥೆ ಅಧ್ಯಕ್ಷ ರವೀಶ್, ಸಾಹಿತಿ, ಪ್ರಕಾಶಕ ಗಣೇಶ ಅಮೀನಗಡ, ಪ್ರೊ.ಮಲ್ಲು, ನಿವೃತ್ತ ಉಪನ್ಯಾಸಕ ರಾಮಣ್ಣ, ಮುಖಂಡರಾದ ರಾಜೇಂದ್ರ, ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ದೇವರಾಜ ಪಿ. ಚಿಕ್ಕಳ್ಳಿ, ಸಮುದ್ಯತಾ ಶ್ರೋತೃ ಬಳಗದ ಅಧ್ಯಕ್ಷ ಕಣ್ಣೂರು ಗೋವಿಂದಚಾರಿ, ಲೇಖಕ ಕಾಳಿಹುಂಡಿ ಶಿವಕುಮಾರ್ ಮೊದಲಾದವರು ಪಾಲ್ಗೊಂಡಿದ್ದರು. ಹನೂರು ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಮಹದೇಶ್ವರ ಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ಅವರನ್ನು ದೇವರಾಜ ನಾಯ್ಡು ಅವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಪರಮೇಶ ಕೆ. ಉತ್ತನಹಳ್ಳಿ, ಬಿ.ಎನ್. ಮಾರುತಿ ಪ್ರಸನ್ನ, ಕಾತ್ಯಾಯಿನಿ ಯಶೋಮಿತ್ರ, ಪ್ರೇಮಾ ಕವಿತೆಗಳನ್ನು ವಾಚಿಸಿದರು. ಜಾನಪದ ಕೈಲಾಸಮೂರ್ತಿ ಪ್ರಾರ್ಥಿಸಿದರು. ಕಾಂತರಾಜ್ ಆಲನಹಳ್ಳಿ ಕಾರ್ಯಕ್ರಮ ನಿರೂಪಿಸಿದರು, ಜ್ಞಾನೋದಯ ಕಾಲೇಜಿನ ಉಪನ್ಯಾಸಕ ಕಿರಣ್ ಕುಮಾರ್ ಸ್ವಾಗತಿಸಿದರು.




# ಜಪಾನ್ ಮಾದರಿ ಕಾಡನ್ನು ಬೆಳೆಸಿ: ರಂಗಕರ್ಮಿ ಕೆ.ವೆಂಕಟರಾಜು



ಚಾಮರಾಜನಗರ, ಸಾರ್ವಜನಿಕ ಸ್ಥಳ ಅಥವ ಸರ್ಕಾರಿ ಜಾಗದಲ್ಲಿ ಚಿಕ್ಕ ಚಿಕ್ಕ ಸ್ಥಳದಲ್ಲಿ ದಟ್ಟವಾದ ಜಪಾನ್ ಮಾದರಿ ಕಾಡನ್ನು ಬೆಳೆಸಬಹುದಾಗಿದೆ ಎಂದು ಸಾಹಿತಿ ಕೆ.ವೆಂಕಟರಾಜು ತಿಳಿಸಿದರು.

ವನಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಈಶ್ವರಿ ಸೋಶಿಯಲ್ ಟ್ರಸ್ಟ್ ವತಿಯಿಂದ ನಗರದ ಕೆ.ಪಿ.ಮೊಹಲ್ಲ ರಸ್ತೆಗಳಿಗೆ 100 ಸಾಲು ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇದಕ್ಕೆ ಮಿಕಿನೋವ ಫಾರೆಸ್ಟ್ ಎಂದು ಕರೆಯುತ್ತಾರೆ. ಈರೀತಿಯ ಕಾಡನ್ನು ಅತಿ ಕಡಿಮೆ ಸಮಯದಲ್ಲಿ ಹೇಗೆ ಬೆಳೆಸಬೇಕೆಂದು ಪರಿಸರ ಪ್ರೇಮಿ ವೆಂಕಟೇಶ್ ಅವರಿಗೆ ತಿಳಿದಿದೆ.

ಇದರಿಂದ ನಮ್ಮ ಚಾಮರಾಜನಗರ ಜಿಲ್ಲೆ ಪ್ರಕೃತಿಕವಾಗಿ ಇನ್ನೂ ಹೆಚ್ಚು ಶ್ರೀಮಂತವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಬಳಿಕ ಮಾತನಾಡಿದ ಚಾಮರಾಜನಗರ ನಗರಾಭೀವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಹಮದ್ ಅಸ್ಗರ್ ನಗರದ ನಾಗರೀಕರು ಮನೆಯ ಮುಂದೆ ಗಿಡಮರಗಳನ್ನು ನೆಟ್ಟು ಬೆಳೆಸಬೇಕು, ಇಲ್ಲದಿದ್ದರೆ ದೇಶದ ರಾಜಧಾನಿ ನವದೆಹಲಿಯಲ್ಲಿನ ಪರಿಸ್ಥಿತಿ ಒದಗುತ್ತದೆ. ಪ್ರಸ್ತುತ ಅಲ್ಲಿ ಅಶುದ್ಧ ಗಾಳಿಯಿಂದಾಗಿ ಜನರು ಹೊರಗೆ ಬರದ ಪರಿಸ್ಥಿತಿ ಬಂದಿದೆ. ನಾವು ಪುಣ್ಯವಂತರು ಶುದ್ದಗಾಳಿಯನ್ನು ಪಡೆಯುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ ನಮ್ಮ ಜಿಲ್ಲೆಯಲ್ಲಿ ಇರುವ ಅರಣ್ಯ ಸಂಪತ್ತು ಮತ್ತು ಸಾಲುಮರಗಳನ್ನು ಬೆಳೆಸಿರುವುದು ಎಂದು ಹೇಳಿದರು.

ಎಸ್.ಡಿ.ಪಿ.ಐ ಅಧ್ಯಕ್ಷ ಅಬ್ರಾರ್ ಅಹಮದ್ ಮಾತನಾಡಿ, ಪರಿಸರ ಪ್ರೇಮಿ ವೆಂಕಟೇಶ್ ಪರಿಸರದ ಮೇಲೆ ಅಪಾರವಾದ ಕಾಳಜಿ ಹೊಂದಿದ್ದು, ಎಲ್ಲಾಕಡೆ ಗಿಡಗಳನ್ನು ನೆಡುವ ಮೂಲಕ ಸಾರ್ವಜನಿಕರಿಗೆ ನೆರಳು ನೀಡುತ್ತಿದ್ದಾರೆ. ಅದೇ ರೀತಿಯಲ್ಲಿ ಕೆ.ಪಿ.ಮೊಹಲ್ಲ ದಲ್ಲೂ ಸಹ ಸಾಲು ಗಿಡಗಳನ್ನು ನೆಟ್ಟು ಕೊಟ್ಟಿದ್ದಾರೆ ಅವರ ಸೇವೆ ಅನನ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಈಶ್ವರಿ ಸೋಶಿಯಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಪರಿಸರ ಪ್ರೇಮಿ ವೆಂಕಟೇಶ್ ಜಯಲಕ್ಷ್ಮಿ, ಮುಖ್ಯ ಅತಿಥಿಗಳಾಗಿ ಆಲ್ ಮಸೀದಿಯ ಮೌಲಾನ ಮುಫ್ತಿ ಜಾಫರ್ ಹುಸೇನ್ ಸಾಭ್, ಮೌಲಾನ ಮುಸ್ತಕ್ ಅಹಮದ್, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಸಮೀತ್ ಕುಮಾರ್, ನಗರಸಭಾ ಮಾಜಿ ಸದಸ್ಯ ಎಂ.ಮಹೇಶ್, ಸಿಟಿಜನ್ ಟ್ರೇಡರ್ ಮಾಲಿಕ ಸೈಯದ್ ಪುರ್ ಖಾನ್, ಆಟೋ ಚಾಲಕರ ಸಂಘದ ಅಧ್ಯಕ್ಷ ಅಕ್ರಂ ಪಾಷ ಮುಂತಾದವರು ಹಾಜರಿದ್ದರು.

# ಮದಗಜಗಳ ಕಾದಾಟದಲ್ಲಿ ಗಂಡಾನೆ ಸಾವು

ಚಾಮರಾಜನಗರ, ಯಳಂದೂರು ತಾಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತಾರಣ್ಯ ಪ್ರದೇಶದಲ್ಲಿ ಎರಡು ಮದಗಜಗಳ ನಡುವಿನ ಕಾದಾಟದಲ್ಲಿ ಒಂದು ಗಂಡಾನೆ ಮೃತಪಟ್ಟಿರುವುದು ತಡವಾಗಿ ಬೆಳಕಿಗೆ ಬಂದಿದೆ. ಯಳಂದೂರು ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ವಲಯದ ಪುರಾಣಿ ಪೋಡು ಗಸ್ತಿನ ಎರೆಕಟ್ಟೆ ಕೆರೆ ಹತ್ತಿರ ಮೃತ ಗಂಡಾನೆ ಕಳೇಬರ ಕಂಡುಬಂದಿದ್ದು, ಅಂದಾಜು 30ರಿಂದ 35 ವರ್ಷ ಇರಬಹುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ. ಘಟನೆ ನಡೆದು 7 ರಿಂದ 8 ದಿನ ಆಗಿರಬಹುದು ಎಂದು ಹೇಳಲಾಗಿದೆ. ಆನೆಯ ದಂತಗಳು ಸುರಕ್ಷಿತವಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗಿದೆ.



## ಯುವರಾಜ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ ಹೇಳಿಕೆ

# ವಿದ್ಯಾರ್ಥಿಗಳ ಬಗ್ಗೆ ಕಾಳಜಿಗೆ ಮತ್ತೊಂದು ಹೆಸರು ಪ್ರೊ.ಅನಿಟ



ಮೈಸೂರು: ಮಾನವೀಯತೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಕಾಳಜಿಗೆ ಮತ್ತೊಂದು ಹೆಸರು ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಎಂದು ಯುವರಾಜ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ಈ ಮಾಸಾಂತ್ಯದಲ್ಲಿ ವಯೋನಿವೃತ್ತಿ ಹೊಂದುತ್ತಿರುವ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಅವರಿಗೆ ಕಾಲೇಜಿನ ಸಭಾಂಗಣದಲ್ಲಿ ಶಿಷ್ಯ ಬಳಗದ ವತಿಯಿಂದ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು. ಪ್ರೊ.ಅನಿಟ ವಿವಿಯಲ್ಲಿ 38 ವರ್ಷಗಳ ಸೇವಾವಧಿಯಲ್ಲಿ ಮಹಾರಾಜ ಕಾಲೇಜಿನಲ್ಲಿಯೇ 35 ವರ್ಷ ಸೇವೆ ಸಲ್ಲಿಸಿದ್ದಾರೆ. ಈ ಪೈಕಿ ಮೂರು ವರ್ಷಗಳ ಕಾಲ ಪ್ರಾಂಶುಪಾಲರಾಗಿದ್ದರು. ಆ ಸಂದರ್ಭದಲ್ಲಿ ನಾನು ಮಹಾರಾಜ ಹಾಸ್ಟೆಲ್‌ನ ನಿಲಯಪಾಲಕನಾಗಿದ್ದೇನೆ. ಪ್ರೊ. ಅನಿಟ ಅವರು ಹಾಸ್ಟೆಲ್‌ನ 552 ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಲು ಬೇಕಾದ ಪುಸ್ತಕಗಳಿರುವ ಗ್ರಂಥಾಲಯ, ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ಇರಲು ಅನುಕೂಲವಾಗುವಂತೆ ಧ್ಯಾನ ಕೇಂದ್ರ, ಡಿ ಗ್ರೂಪ್ ನೌಕರರಿಗೆ ಹಿಡಿದು ಎಲ್ಲರೊಂದಿಗೆ ಸೇರಿ ಸಹಭೋಜನ ಪ್ರಮುಖವಾದವು ಎಂದು ಹೇಳಿದರು.

ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಸರ್ವಮಂಗಳಬಾಯಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರೊ.ಅನಿಟ ಅವರು ದಕ್ಷತೆ, ಪ್ರಾಮಾಣಿಕತೆ ವೃತ್ತಿ ನಿರ್ವಹಿಸಿದ್ದಾರೆ. ಹಿಂದೆ ಗುರು– ಶಿಷ್ಯರ ನಡುವೆ ಅತ್ಯುತ್ತಮ ಬಾಂಧವ್ಯವಿತ್ತು. ಅಂತಹ ವಾತಾವರಣವನ್ನು ನಿರ್ಮಿಸುವ ಜವಾಬ್ದಾರಿ ಅಧ್ಯಾಪಕರ ಕೈಯಲ್ಲಿಯೇ ಇರುತ್ತದೆ. ಅನಿಟ ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಿಂದ ನಿವೃತ್ತರಾಗುವುದಿಲ್ಲ. ಇದು ಬದುಕಿನ ಇನ್ನೊಂದು ಮಜಲು ಎಂದರು.

ಅಭಿನಂದನಾ ಭಾಷಣ ಮಾಡಿದ ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಮುಖ್ಯಸ್ಥೆ ಪ್ರೊ. ಎಚ್.ಆರ್.ಚೇತನಾ, ಯಾವುದೇ ಪ್ರತಿಫಲ ಬಯಸದೇ ತಮ್ಮ ವೃತ್ತಿಯಿಂದ ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುವ ವ್ಯಕ್ತಿತ್ವ ಪ್ರೊ.ಅನಿಟ ಅವರದು. ಅಧ್ಯಾಪಕರು, ವಿದ್ಯಾರ್ಥಿಗಳ ಬಗ್ಗೆ ಅವರ ಕಾಳಜಿ, ಪ್ರಾಮಾಣಿಕತೆ, ಸಮಾನತೆ ಎದ್ದು ಕಾಣುವ ಗುಣಗಳು ಎಂದರು.

ಸನ್ಮಾನ ಸ್ವೀಕರಿಸಿದ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್, ಅಧ್ಯಕ್ಷತೆವಹಿಸಿದ್ದ ಮಹಾರಾಜ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಎಚ್.ಎಂ.ವಸಂತಮ್ಮ ಮಾತನಾಡಿದರು. ಪ್ರೊ.ಅನಿಟ ಅವರ ಪತಿ ನೆಸ್ಟರ್ ಡಿಸೋಜ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯಅತಿಥಿಯಾಗಿದ್ದರು. ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ಸಿ. ನಾಗರಾಜು ವಿಶೇಷ ಆಹ್ವಾನಿತರಾಗಿದ್ದರು. ಚೈತ್ರಾ ನಿರೂಪಿಸಿದರು. ಗೋಪಾಲ್ ವಂದಿಸಿದರು, ಕೆ.ಪ್ರಣತಿ ಪ್ರಾರ್ಥಿಸಿದರು. ಶ್ರೀದೇವಿ, ಲತಾ ಕೆ.ಬಿದ್ದಪ್ಪ, ಇಂದಿರಮ್ಮ, ತಿಮ್ಮರಾಯಪ್ಪ, ರಾಚಯ್ಯ, ಬಿ.ಕೆ.ಜ್ಞಾನಪ್ರಕಾಶ್, ಎಸ್.ಕೃಷ್ಣಪ್ಪ, ಆರ್.ನಿಂಗರಾಜು, ನಿಂಗರಾಜು ಹಳೇಬೀಡು, ಗ್ರಂಥಪಾಲಕ ಡಾ.ಸೋಮಶೇಖರ್, ಬಸವರಾಜು ಕುರಬೂರು, ಜೆ, ಹೇಮಂತ್, ಸಬಿತಾ, ಪ್ರಜ್ವಲ್, ಸಿಂಧಿ, ಮಹೇಶ್, ಭವ್ಯಾ ಪಾಲ್ಗೊಂಡಿದ್ದರು.

# ಕಾರ್ಖಾನೆ ಸ್ಥಗಿತ ಮಾಡುವಂತೆ ಒತ್ತಾಯ



ಗುಂಡ್ಲುಪೇಟೆ: ತಾಲ್ಲೂಕಿನ ಕಗ್ಗಳದಹುಂಡಿ ಬಳಿ ಚೈನಾ ಮೂಲದ ಚೆಂಡುಮಲ್ಲಿಗೆ ಕಾರ್ಖಾನೆಯು ಕಳೆದ ಹತ್ತು ವರ್ಷದಿಂದ ಕೆಲಸ ನಿರ್ವಹಿಸುತಿದ್ದು, ಒಂದು ವರ್ಷದಿಂದ ಕಾರ್ಖಾನೆಯಿಂದ ದುರ್ವಾಸನೆ ಬರುತ್ತಿದೆ ಈಗಾಗಿ ತೆರಕಣಾಂಬಿ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳು, ಶಿಂಡನಪುರ ಗ್ರಾ.ಪಂವ್ಯಾಪ್ತಿ, ಕೆಲಸೂರು ಗ್ರಾ.ಪಂ ವ್ಯಾಪ್ತಿ ಹಾಗೂ ಕೊಡಸೋಗೆ ಗ್ರಾ.ಪಂ ವ್ಯಾಪ್ತಿಯ ಜನರು ಉಸಿರಾಡಲು ತೊಂದರೆಯಾಗುತ್ತಿದೆ ಆಗಾಗಿ ಕಾರ್ಖಾನೆ ಸ್ಥಗಿತ ಮಾಡುವಂತೆ ಒತ್ತಾಯಿಸಿದರು.

ಈಗಾಗಿ ಸೋಮವಾರ ನಾಲ್ಕು ಗ್ರಾ.ಪಂ ಗಳಿಗೆ ಮುತ್ತಿಗೆ ಹಾಕಿ ಬೀಗ ಜಡಿದು ಪ್ರತಿಭಟನೆ ಮಾಡುತ್ತೇವೆ ತೆರಕಣಾಂಬಿ, ಕೊಡಸೋಗೆ, ಶಿಂಡನಪುರ, ಕೆಲಸೂರು ಗ್ರಾ.ಪಂ ವ್ಯಾಪ್ತಿಯಲ್ಲಿ ಸಮಸ್ಯೆ ಇದೆ ಎಂದರು.

ಈ ವಿಚಾರವಾಗಿ ಹದಿನೈದು ದಿನದ ಹಿಂದೆ ಬೃಹತ್ ಬೈಕ್ ರ್ಯಾಲಿ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆವು ಹಾಗೂ ಮಾಲಿನ್ಯ ಇಲಾಖೆಗೂ ಮನವಿ ಮಾಡಿದ್ದೆವು ಬದುಕುವುದಕ್ಕಾಗಿ ಶುದ್ಧ ಗಾಳಿಗಾಗಿ ಹೋರಾಟ ಮಾಡುತ್ತಿದ್ದೇವೆ, ಎಂದರು. ನಮ್ಮ ಉದ್ದೇಶ ಚಂಡು ಮಲ್ಲಿಗೆ ಕಾರ್ಖಾನೆ ಮುಚ್ಚಿಸುವುದು ಯಾವುದೇ ಚಂಡುಮಲ್ಲಿಗೆ ಬೆಳೆಂ ಯುವ ರೈತರಿಗೆ ತೊಂದರೆ ಕೊಡುವುದಲ್ಲ ಕಾರ್ಖಾ ನೆಯನ್ನು ಜನವಸತಿ ಪ್ರದೇಶ ಹೊರತುಪಡಿಸಿ ಹೊರಗಡೆ ಮಾಡಲಿ ಕಳೆದ 25 ವರ್ಷದಿಂದ ರೈತರು ಚಂಡುಮಲ್ಲಿಗೆ ಬೆಳೆಯುತ್ತಿದ್ದರು ಆಗ ಹೊರಗೆ ಮಾರಾಟ ಮಾಡುತಿದ್ದರು ಇದು ಪರ್ಯಾಯ ಬೆಳೆ ಬೆಳಯಲಿ ಹತ್ತು ಜನ ರೈತರ ಹಿತಕ್ಕಾಗಿ ಸಾವಿರಾರು ರೈತರಿಗೆ ತೊಂದರೆಯಾಗಬಾರದು, ನಮಗೆ ಕೂಲಿ ಕಾರ್ಮಿಕರು ಬರುತಿಲ್ಲ, ಗಾಳಿ ಸಮಸ್ಯೆಯಾಗುತ್ತಿದೆ ಜಿಲ್ಲಾಧಿಕಾರಿ ಗಳು ಕೇಂದ್ರಕ್ಕೆ ಮಾಹಿತಿ ಕೊಟ್ಟು ಅದನ್ನು ನಿಲ್ಲಿಸುವ ಕೆಲಸ ಮಾಡಲಿ, ಜನಗಳಿಗೆ ತೊಂದರೆಯಾದ ಮೇಲೆ ಅಂತಹ ಕಾರ್ಖಾನೆ ನಮಗೆ ಬೇಡ ಕಾರ್ಖಾನೆ ಬಂದ್ ಮಾಡಿಸಲಿ ಇಲ್ಲದಿದ್ದರೆ ಕಾರ್ಖಾನೆಗೆ ಹೂ ಸಾಗಾನೆಗೆ ಅವಕಾಶ ಮಾಡಿಕೊಡಲ್ಲ ಎಂದರು.

ಈ ಸಂದರ್ಭದಲ್ಲಿ ಸಾಮೂಹಿಕ ನಾಯಕತ್ವ ರೈತಸಂಘದ ಅಡಿಯಲ್ಲಿ ಶಿಂಡನಪುರ, ಕಂದೇಗಾಲ, ಕೆಲಸಿಪುರ, ಮೊಳ್ಳಯ್ಯನಹುಂಡಿ ಗ್ರಾಮದ ರೈತರು ಮತ್ತಿತರರಿದ್ದರು.

# ಜ.3ರಿಂದ ಸುಭಾಷ್ ಪಾಳೇಕರ್ ಕೃಷಿಪದ್ಧತಿ(ನೈಸರ್ಗಿಕಕೃಷಿ) ಕಾರ್ಯಾಗಾರ



ಚಾಮರಾಜನಗರ, ಕರ್ನಾಟಕ ರಾಜ್ಯರೈತಸಂಘ, ಹಸಿರುಸೇನೆ ಸಾಮೂಹಿಕನಾಯಕತ್ವ ಹಾಗೂ ಹಳೇಬೀಡಿನ ಪುಷ್ಪಗಿರಿ ಸಹಯೋಗದಲ್ಲಿ ಜ.3ರಿಂದ6ರವರಗೆ ಹಾಸನಜಿಲ್ಲೆ ಬೇಲೂರು ತಾಲ್ಲೂಕಿನ ಹಳೇಬೀಡಿನ ಶ್ರೀಕ್ಷೇತ್ರಪುಷ್ಪಗಿರಿಯಲ್ಲಿ ನೈಸರ್ಗಿಕ ಕೃಷಿಕ ಪದ್ಮಶ್ರೀ ಸುಭಾಷ್ ಪಾಳೇಕರ್ ಅವರಿಂದ ಸುಭಾಷ್ ಪಾಳೇಕರ್ ಕೃಷಿಪದ್ಧತಿ (ನೈಸರ್ಗಿಕಕೃಷಿ) ಕಾರ್ಯಾಗಾರ ನಡೆಯಲಿದೆ ಎಂದು ರಾಜ್ಯ ರೈತಸಂಘ, ಹಸಿರುಸೇನೆ ಸಾಮೂಹಿಕನಾಯಕತ್ವ ಅಧ್ಯಕ್ಷಿಯ ಮಂಡಳಿ ಸದಸ್ಯ ಹೊನ್ನೂರುಪ್ರಕಾಶ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಚಿನ ದಿನಗಳಲ್ಲಿ ಹೈಬ್ರೀಡ್‌ಬಿತ್ತನೆ ಬೀಜಗಳ ಬಳಕೆ, ರಾಸಾಯನಿಕ ಗೊಬ್ಬರ ಬಳಕೆ ಹೆಚ್ಚಾದಂತೆ ಭೂಮಿಯ ಸತ್ವ ನಾಶವಾಗುತ್ತಿದೆ. ಒಕ್ಕಲುತನ ದುಬಾರಿಯಾಗುತ್ತಿದೆ. ಯುವಕರು ಕೃಷಿಯಿಂದ ವಿಮುಖರಾಗಿ ಉದ್ಯೋಗ ಅರಸಿ, ನಗರಗಳತ್ತ ವಲಸೆ ಹೋಗುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಂದ ಹೊರಬರಲು ನೈಸರ್ಗಿಕ ಕೃಷಿಯತ್ತ ಮುಖ ಮಾಡಬೇಕಿದೆ. ಬೀಜ, ಗೊಬ್ಬರ ಕೀಟನಾಶಕ ಎಲ್ಲವನ್ನು ನಮ್ಮ ಹೊಲದೊಳಗೆ, ನಾವೇ ತಯಾರಿಸಿ, ಪರಿಸರಕ್ಕೆ ಪೂರಕವಾದ ಕೃಷಿಯನ್ನು ಲಾಭದಾಯಕ ಮಾಡುವ ಕುರಿತು ಕೃಷಿಕರಿಗೆ ಅರಿವು ಮೂಡಿಸುವುದೇ ಕಾರ್ಯಾಗಾರದ ಉದ್ದೇಶವಾಗಿದೆ. ಸುಭಾಷ್ ಪಾಳೇಕರ್ ಅವರ ಜತೆ ನೈಸರ್ಗಿಕ ಕೃಷಿಮಾಡಿ, ಯಶಸ್ಸುಕಂಡಿರುವ ಸಾಧಕರು ಕಾರ್ಯಾಗಾರದಲ್ಲಿ ಭಾಗವಹಿಸಿ, ತಮ್ಮ ಅನುಭವಹಂಚಿಕೊಳ್ಳುವರು. ಕೃಷಿಯ ಬಗ್ಗೆ ಆಸಕ್ತಿ ಇರುವ ಜಿಲ್ಲೆಯ ರೈತಕುಟುಂಬದ ಯಾರಾದರೂ ಮಗ, ಅಥವಾ ಮಗಳಾದರೂ ಸರಿ 4ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಕಾರ್ಯಾಗಾರ ಯಶಸ್ವಿಗೊಳಿಸಬೇಕು ಎಂದು ಮನವಿಮಾಡಿದರು.

ಕಾರ್ಯಾಗಾರದಲ್ಲಿ ಭಾಗವಹಿಸುವವರು ಊಟ, ವಸತಿ ಸೇರಿದಂತೆ ಒಬ್ಬರಿಗೆ 800 ರೂ.ಶುಲ್ಕ ಪಾವತಿಸಬೇಕು, ಆಸಕ್ತರು ಪಂಡಿತ್ ಸೋಮಶೇಖರಶಿವಾಚಾರ್ಯ ಸ್ವಾಮೀಜಿ (ಕೆನರಬ್ಯಾಂಕ್–ಖಾತೆಸಂಖ್ಯೆ 0552101016126– ಐಎಫ್‌ಎಸ್‌ಸಿ– ಸಿಎನ್‌ಆರ್‌ಬಿ0000552) ಹಳೇಬೀಡು ಶಾಖೆಗೆ ಹಣಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು, ಹಣಪಾವತಿಸಿದ ನಂತರ (91–7676280136) ನಂಬರ್ಗೆ ವಾಟ್ಸಪ್ ಮಾಡಬೇಕು, ಪ್ರತ್ಯೇಕವಸತಿ ವ್ಯವಸ್ಥೆ ಬೇಕಾಗಿರುವವರು–ಮೊ– 7676280136) ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ರಾಜ್ಯರೈತಸಂಘ, ಹಸಿರುಸೇನೆ ಸಾಮೂಹಿಕನಾಯಕತ್ವ ಅಧ್ಯಕ್ಷಿಯ ಮಂಡಳಿಯ ಹನೂರುಘಟಕದ ಮಾದಪ್ಪ, ನಂದೀಶ್, ಮಹದೇವಸ್ವಾಮಿ, ಜಗದೀಶ್ ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರ ಆಯ್ಕೆ

ಹನೂರು: ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಜಿ.ದೇವರಾಜು ನಾಯ್ಡು, ಪ್ರಧಾನ ಕಾರ್ಯದರ್ಶಿಯಾಗಿ ಪ್ರಭುಸ್ವಾಮಿ ಅವಿರೋಧ ಆಯ್ಕೆಯಾದರು.

ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ 2025–2028ನೇ ಸಾಲಿಗೆ ನಡೆದ ಚುನಾವಣೆಗೆ ಅಧ್ಯಕ್ಷ ಪ್ರಧಾನ ಕಾರ್ಯದರ್ಶಿ ಎರಡು ಉಪಾಧ್ಯಕ್ಷ ಎರಡು ಕಾರ್ಯದರ್ಶಿ ಖಜಾಂಚಿ ಸ್ಥಾನಕ್ಕೆ, ಮೂರು ನಿರ್ದೇಶಕ ಸ್ಥಾನಗಳಿಗೆ ಒಂದೊಂದೇ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಸ್ಪರ್ಧೆ ಮಾಡಿದ್ದ ಎಲ್ಲರನ್ನು ಅವಿರೋಧ ಆಯ್ಕೆ ಮಾಡಲಾಯಿತು. ಚುನಾವಣಾ ಅಧಿಕಾರಿಯಾಗಿ ಹಿರಿಯ ಪತ್ರಕರ್ತ ಹಾಗೂ ಸಂಘದ ಮಾಜಿ ಅಧ್ಯಕ್ಷ ಎಂ.ಇ ಮಂಜುನಾಥ್, ಸಹಾಯಕ ಚುನಾವಣೆ ಅಧಿಕಾರಿಗಳಾಗಿ ರಾಜ್ಯ ಪರಿಷತ್ ಸದಸ್ಯ ಮಹೇಂದ್ರ, ಜಿಲ್ಲಾ ಕಾರ್ಯಕಾರಿ ಸದಸ್ಯ ಎಂಎನ್ ವಿಜಯಕುಮಾರ್ ಕರ್ತವ್ಯ ನಿರ್ವಹಿಸಿದರು. ಅಧ್ಯಕ್ಷರಾಗಿ ಜಿ ದೇವರಾಜು ನಾಯ್ಡು, ಪ್ರಧಾನ ಕಾರ್ಯದರ್ಶಿಯಾಗಿ ಪ್ರಭುಸ್ವಾಮಿ ಎಂ, ಉಪಾಧ್ಯಕ್ಷರಾಗಿ ಗೋವಿಂದ ಕೆ ರಮೇಶ್ ಎಂ ಕಾರ್ಯದರ್ಶಿಯಾಗಿ ಮಧು, ಶಾಗ್ಯ ನಂದೀಶ್ ಖಜಾಂಚಿಯಾಗಿ ಸೋಮಶೇಖರ್ ಆರ್, ನಿರ್ದೇಶಕರಾಗಿ ಮಹದೇವ ಪ್ರಸಾದ್ ಬಿ ಬಸವರಾಜು ಮಹದೇವಸ್ವಾಮಿ ಸಿ ಅವಿರೋಧ ಆಯ್ಕೆಯಾದರು.



ನಿಕಟ ಪೂರ್ವ ಅಧ್ಯಕ್ಷ ಮಹಾದೇಶ್ ಮಾತನಾಡಿ ಹನೂರು ತಾಲೂಕು ಕೇಂದ್ರದಲ್ಲಿ ಪತ್ರಕರ್ತರ ಭವನ ನಿರ್ಮಾಣ ಮಾಡಲು ಕಳೆದ ನಾಲ್ಕು ವರ್ಷಗಳಿಂದ ನಿರಂತರವಾಗಿ ಶ್ರಮವಹಿಸಲಾಗಿದೆ. ಎಲ್ಲಾ ಪದಾಧಿಕಾರಿಗಳ ಸಹಕಾರದಿಂದ ತಾಲೂಕು ಕಾರ್ಯ ನಿರ್ವಹಿತ ಪತ್ರಕರ್ತರ ಭವನಕ್ಕೆ 10 ಸೆಂಟ್ ನಿವೇಶನ ಮಂಜೂರಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ ಅನುದಾನದ ಕೊರತೆಯಿಂದ ಕಾಮಗಾರಿ ಕಳೆದ ಒಂದು ವರ್ಷದಿಂದ ಸ್ಥಗಿತವಾಗಿದೆ ಈಗಾಗಲೇ ಸಂಸದರು ಶಾಸಕರಿಗೆ ಮುಂದುವರೆದ ಕಾಮಗಾರಿಗೆ ಅನುದಾನ ನೀಡುವಂತೆ ಮನವಿ ನೀಡಲಾಗಿದೆ. ಶಾಸಕರು ಸಂಸದರು ಅನುದಾನ ನೀಡುವ ಭರವಸೆ ನೀಡಿದ್ದಾರೆ. ಅದರಂತೆ ಮುಂದಿನ ತಿಂಗಳು ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸಲು ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

ನೂತನ ಅಧ್ಯಕ್ಷ ದೇವರಾಜು ನಾಯ್ಡು ಮಾತನಾಡಿ ನನ್ನ ಮೇಲೆ ವಿಶ್ವಾಸವಿಟ್ಟು ನಮ್ಮ ಸಂಘದ ಎಲ್ಲಾ ಸದಸ್ಯರು ನನ್ನನ್ನು ಅವಿರೋಧವಾಗಿ ಅಧ್ಯಕ್ಷನಾಗಿ ಆಯ್ಕೆ ಮಾಡಿದ್ದಾರೆ. ಈಗಾಗಲೇ ಒಂದು ಅವಧಿಗೆ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ ಮುಂದುವರೆದು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾಲೂಕು ಕೇಂದ್ರದಲ್ಲಿ ಪತ್ರಕರ್ತರ ಭವನ ನಿರ್ಮಾಣ ಪೂರ್ಣಗೊಳಿಸುವುದರ ಜೊತೆಗೆ ನಮ್ಮ ಸದಸ್ಯರಿಗೆ ಶಾಸಕರು ಹಾಗೂ ಜನಪ್ರತಿನಿಧಿಗಳ ಗಮನ ಸೆಳೆದು ನಿವೇಶನ ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

**ಜಿಲ್ಲಾಧ್ಯಕ್ಷರಿಂದ ಅಭಿನಂದನೆ**

ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಜಿ ದೇವರಾಜ ನಾಯ್ಡು, ಪ್ರಧಾನ ಕಾರ್ಯದರ್ಶಿ ಎಂ ಪ್ರಭುಸ್ವಾಮಿ ರವರನ್ನು ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಗೌರವಿಸಿ ಸನ್ಮಾನಿಸಿದರು.

ನಂತರ ಜಿಲ್ಲಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಮಾತನಾಡಿ ಹನೂರು ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಅವಿರೋಧವಾಗಿ ಆಯ್ಕೆ ಮಾಡಿಕೊಂಡಿರುವುದು ಸಂತಸ ತಂದಿದೆ. ನಿಮ್ಮ ಎಲ್ಲಾ ಕಾರ್ಯಗಳಿಗೂ ಜಿಲ್ಲಾ ಸಂಘ ಬೆಂಬಲವಾಗಿ ನಿಲ್ಲಲಿದೆ, ಭವನ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟ ಸಚಿವರು ಶಾಸಕರು ವಿಧಾನ ಪರಿಷತ್ ಸದಸ್ಯರ ಜೊತೆ ಚರ್ಚೆ ನಡೆಸಿ ನಿಮಗೆ ಅನುದಾನ ಕೊಡಿಸುವುದರ ಜೊತೆಗೆ ಭವನ ಪೂರ್ಣಗೊಳಿಸಲು ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದರು. ಈ ವೇಳೆ ಸದಸ್ಯರುಗಳಾದ ಸುರೇಶ್ ಮಂಗಲ ಲಿಂಗರಾಜು, ಮಹದೇವಸ್ವಾಮಿ, ರಾಜೇಶ್, ನಿರಂಜನ್, ಶಿವಕುಮಾರ್ ಲಿಂಗರಾಜು ವಿಜಯ್ ಕುಮಾರ್ ನಾಗೇಂದ್ರ ಮಹಾದೇವ ಶಿವಶಂಕರ್,ರವಿ, ಪ್ರದೀಪ್, ಅಭಿಲಾಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಫೆ.12ಕ್ಕೆ ಕರ್ನಾಟಕ ಬಂದ್

## ಕೇಂದ್ರ ಸರ್ಕಾರ ಜನವಿರೋಧಿ, ರೈತ ವಿರೋಧಿ ಕಾಯ್ದೆ ಖಂಡನೆ । ರೈತಸಂಘದ ರಾಜ್ಯಾಧ್ಯಕ್ಷ ಬಸವರಾಜಪ್ಪ ಹೇಳಿಕೆ

ಗುಂಡ್ಲುಪೇಟೆ: ಕೇಂದ್ರ ಸರ್ಕಾರ ರೈತ ವಿರೋಧಿ ಹಾಗೂ ಜನ ವಿರೋಧಿ ನೀತಿಗಳನ್ನು ಜಾರಿಗೆ ತರುವ ಮೂಲಕ ವಿದ್ಯುತ್, ಕೃಷಿ, ವಿದ್ಯುತ್ ಶಕ್ತಿ ಖಾಸಗೀಕರಣ ಮಾಡಲು ಹೊರಟಿದ್ದಾರೆ ಎಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಗೋಷ್ಠಿ ಯಲ್ಲಿ ಸಂಯುಕ್ತ ಮೋರ್ಚಾ ರೈತಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಎಚ್ ಆರ್ ಬಸವರಾಜು

ವಿದ್ಯುತ್ ಖಾಸಗೀಕರಣವಾದರೆ ಕರೆನ್ಸಿ ಹಾಕಿಸಿಕೊಂಡು ವಿದ್ಯುತ್ ಬಳಸುವ ದುರ್ದೈವ ಎದುರಾಗಲಿದೆ, ಬಿತ್ತನೆ. ಬೀಜ ಮಸೂದೆ 2025 ಮಸೂದೆ ಮಂಡನೆಯಾಗಿದೆ, 14 ತಿಂಗಳು ಸಂಯುಕ್ತ ಕಿಸನ್ ಮೋರ್ಚಾ ರೈತವಿರೋಧಿ ಐದು ಕಾಯ್ದೆ ವಾಪಸ್ಸು ಪಡೆಯಲು ಹೋರಾಟ ಪ್ರತಿಭಟನೆ ನಡೆಸಲಾಯಿತು ನಂತರ ಹಿಂಪಡೆದರು.

ಆದರೆ ಹಿಂಬಾಗಿಲಿನಿಂದ ಎಪಿಎಂಸಿ ಕಾಯ್ದೆಯಲ್ಲಿರುವ ಅಂಶಗಳನ್ನು ಕೃಷಿ ಮಾರುಕಟ್ಟೆ ರಾಷ್ಟ್ರೀಯ ಧೋರಣೆ ಕಾಯ್ದೆ ತರಲು ಹಿಂಬಾಗಿಲಿನಿಂದ ಹೊರಟಿದ್ದು ಅದಕ್ಕೆ ನಮ್ಮ ವಿರೋಧವಿದೆ ಎಂದರು.

ಕೃಷಿ ಉತ್ಪಾದನೆ ಮತ್ತು ವಿತರಣೆ ಎರಡನ್ನು ಖಾಸಗಿಯವರಿಗೆ ಒಪ್ಪಿಸಲು ಯತ್ನಮಾಡುತ್ತಿದೆ ಗುತ್ತಿಗೆ ಕೃಷಿ ವ್ಯವಸ್ಥೆ ಬರಲಿದ್ದು ರೈತರ ಭೂಮಿ ಬರಡು ಮಾಡಲು ಹೊರಟಿದ್ದಾರೆ ಕಾರ್ಮಿಕ ಕಾಯ್ದೆ ಎಲ್ಲಾ ಕೋಡ್ ಗಳನ್ನು ರದ್ದು ಮಾಡಲು ಹೊರಟಿದ್ದಾರೆ, ಇದರಿಂದ ರೈತರನ್ನು ಕೃಷಿಯಿಂದ ಹೊರಗೆ ಹಾಕಲು ಯತ್ನಿಸುತಿದ್ದಾರೆ ಎಂದು ಆರೋಪಿಸಿದರು. ಭೂ ಸುಧಾರಣೆ ಕಾಯ್ದೆ ಎಪಿಎಂಸಿ ಕಾಯ್ದೆ, ವಿದ್ಯುತ್ ಖಸಗೀಕರಣ ಹಿಂಪಡೆಯುವುದಾಗಿ ಹೇಳಿ ಹಿಂಬಾಗಿಲಿನಿಂದ ರೈತರ ಮೇಲೆ ಹೊರೆ ಹಾಕಲು ಯತ್ನಿಸುತ್ತದೆ,



ರಾಜ್ಯ ಸರ್ಕಾರ ಕೇಂದ್ರ ಹಣತಿಯಂತೆ ಕಾಯ್ದೆಗಳನ್ನು ತರಲಿದೆ ಜೆಸಿಪಿವೈ, ಸಂಯುಕ್ತ ಕರ್ನಾಟಕ ರೈತ ಒಕ್ಕೂಟದಿಂದ ಕರ್ನಾಟಕ ಬಂದ್ ಫೆ.12 ರಂದು ಕರೆ ನೀಡುತಿದ್ದೇವೆ ಅದಕ್ಕೂ ಮೊದಲು ಎಲ್ಲಾ ಸಂಘ ಒಕ್ಕೂಟಗಳನ್ನು ಕರೆದು ಬಂದ್ ಗೆ ಜನಜಾಗೃತಿ ಮೂಡಿಸುತ್ತೇವೆ ಎಂದರು.

ಚಾ.ನಗರ ಜಿಲ್ಲೆಯಲ್ಲಿ ಮಾನವ ಮತ್ತು ಪ್ರಾಣಿ ಸಂಘರ್ಷ ಹೆಚ್ಚಾಗಿದೆ, ಮಾನವ ಹುಲಿಯಿಂದ ಸತ್ತರೆ ಇಪ್ಪತ್ತು ಲಕ್ಷ ಕೊಡುತ್ತಾರೆ ಆದರೆ ಅದು ಯಾವುದೇಪ್ರಯೋಜನವಿಲ್ಲಮನುಷ್ಯನ ಜೀವಕ್ಕೆ ಬೆಲೆ ಇದೆ ಹಾಗಾಗಿ ಪ್ರಾಣಿ ದಾಳಿ ತಪ್ಪಿಸಬೇಕು ಚಿರತೆಗಳು ಹಳ್ಳಿಗಳಲ್ಲೇ ಇವೆ, ಆನೆ ಹುಲಿ ಗ್ರಾಮೀಣದೆಡೆಗೆ ಬರುತಿದ್ದು ಅಗಾಗಿ ಸಂಘರ್ಷ ಎರ್ಪಟ್ಟಿದೆ ಇದನ್ನುನಿಯಂತ್ರಿಸುವ ಕೆಲಸವಾಗಬೇಕು.

ಬಂಡೀಪುರದಲ್ಲಿ ಸಫಾರಿ ಯಾಕೆ ಬೇಕು ಸರ್ಕಾರ ಹಣ ಮಾಡಲು ಮೋಜಿಗಾಗಿ ಮಾಡುತ್ತಾರೆ ಪ್ರಾಣಿಗಳು ಬೆದರಿ ಗ್ರಾಮೀಣದತ್ತ ಬರುತ್ತಿವೆ ಆಗಾಗಿ ಸಫಾರಿ ನಿಷೇದಿಸಬೇಕು, ಗಣಿಗಾರಿಕೆ ನಿಲ್ಲಿಸಬೇಕು, ಅಕ್ರಮ ರೆಸಾರ್ಟ್ ಮತ್ತು ಅಕ್ರಮ ಹೋಂ ಸ್ಟೇ ಗಳನ್ನು ನಿಲ್ಲಿಸಬೇಕು ಇಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು, ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು.

ಗ್ಯಾರಂಟಿ ಯಿಂದ ಯಾವುದೇ ಅಭಿವೃದ್ದಿಯಾಗಲ್ಲ, ಅದರ ಬದಲು ಕೃಷಿ ಉತ್ತೇನ ನೀಡಲಿ, ಶೈಕ್ಷಣಿಕ ಆರೋಗ್ಯಕ್ಕೆ ಬಳಸಲಿ ಅದನ್ನು ಬಿಟ್ಟು ಈ ಯೋಜನೆಗಳನ್ನು ಬಿಟ್ಟು ಬರಿ ಗ್ಯಾರಂಟಿ ಯೋಜನೆ ಪ್ರಯೋಜನವಿಲ್ಲ ಅದರ ಗುಂಗಿನಲ್ಲಿತೇಲುವುದು ಬೇಡ ಗ್ಯಾರಂಟಿ ನಂಬಿಕೊಂಡರೆ ಮುಂದೆ ಮನೆಗೆ ಹೋಗಬೇಕಾಗುತ್ತದೆ. ಟಿಪ್ಪರ್ ಗಳ ಹಾವಳಿಮಿತಿ ಮೀರಿದ್ದು ಕೇರಳ ತಮಿಳುನಾಡಿಗೆ ಹೋಗುತ್ತದೆ ಒಂದುಲಾರಿಗೆ ಪರಮೀಟ್ ಪಡೆದು ಹತ್ತುಲಾರಿ ಓಡಿಸುತ್ತಾರೆ, ಮೂಲಹೊಳೆ ಯೋಜನೆಯಿಂದ ನೀರು ತಂದರೆ ಗುಂಡ್ಲುಪೇಟೆಗೆ ಸಂಪೂರ್ಣ ನೀರೊದಗಿಸಬಹುದು, ಎಂದರು. ರೈತ ಸಂಘದ ರಾಜ್ಯಾಧ್ಯಕ್ಷ ಹೆಚ್ ಆರ್ ಬಸವರಾಜಪ್ಪ, ಕರ್ನಾಟಕ ರೈತಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಹೊನ್ನೂರು ಬಸವಣ್ಣ, ಜಿಲ್ಲಾ ಉಪಾಧ್ಯಕ್ಷ ಪುಟ್ಟೇಗೌಡ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೆಗ್ಗೋಠಾರ ವಿಜಯಕುಮಾರ್ , ಜಿ.ಪ್ರದಾನ ಕಾರ್ಯದರ್ಶಿ ಕುಮಾರ್ ಮತ್ತಿತರರಿದ್ದರು.

# ಜಾನಪದ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

ಎಚ್.ಡಿ.ಕೋಟೆ: ತಾಲೂಕಿನ ಅಂತರಸಂತೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಜ್ಞಾನವೇಣಿ ಜಾನಪದ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ವಿಭಾಗ ಮಟ್ಟದ ಜಾನಪದ ಸ್ಪರ್ಧೆಯಲ್ಲಿ ಅಂತರಸಂತೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿ ಜ್ಞಾನವೇಣಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಆನೆಗಟ್ಟಿ ಗ್ರಾಮದ ಜ್ಞಾನವೇಣಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವುದಕ್ಕೆ ಶಾಲೆಯ ಪ್ರಾಂಶುಪಾಲ ಮಹದೇವ ಹರ್ಷ ವ್ಯಕ್ತಪಡಿಸಿದ್ದಾರೆ. ಓದಿನ ಜೊತೆಗೆ ಜಾನಪದದಲ್ಲೂ ಆಸಕ್ತಿ ಇರುವುದು ನಿಜಕ್ಕೂ ಬಹಳ ಹೆಮ್ಮೆಯ ವಿಚಾರ. ಇತ್ತೀಚಿನ ದಿನಗಳಲ್ಲಿ ಯುವ ಜನಾಂಗವು ಮೊಬೈಲ್ ಗೀಳಿಗೆ ಬಿದ್ದು, ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಆದರೆ ಜ್ಞಾನವೇಣಿ ಓದಿನ ಜೊತೆಗೆ ಕಲಾ ಪ್ರತಿಭೆಯನ್ನು ಪ್ರದರ್ಶಿಸಿ ನಮ್ಮ ಶಾಲೆಗೆ, ನಮ್ಮ ತಾಲೂಕಿಗೆ ಹೆಮ್ಮೆ ತಂದಿದ್ದಾರೆ. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ದೇಸಿ ಸಂಸ್ಕೃತಿಯನ್ನು ಸಾರುವ ಅನೇಕ ಜನಪದ ಗೀತೆ, ಜನಪದ ನೃತ್ಯ ಕಲೆಗಳು ಇವೆ. ಇದರ ಬಗ್ಗೆ ಯುವಕ–ಯುವತಿಯರು ಆಸಕ್ತಿ ಮನೋಭಾವನೆ ಬೆಳೆಸಿಕೊಂಡು, ಇದನ್ನು ಉಳಿಸಿಕೊಂಡು ಹೋಗಬೇಕು. ಮೊಬೈಲ್ ಕಡೆ ಮಾರುಹೋಗದೆ ಸಾಂಸ್ಕೃತಿಕ ಲೋಕದಲ್ಲಿ ಮುಂದೆ ಬರಬೇಕು ಎಂದು ಮನವಿ ಮಾಡಿದರು.

ಅಂತರಸಂತೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿಲಯಪಾಲಕ ಸಂಜಯ್ ಕುಮಾರ್ ಹಾಗೂ ಬೋಧಕ,ಬೋಧಕೇತರ ವರ್ಗದವರು ಪೋಷಕ ಶಿಕ್ಷಕರ ಸಮಿತಿಯ ಸದಸ್ಯರು , ತರಬೇತುದಾರ ತಂದೆ ದೇವರಾಜು ಜ್ಞಾನವೇಣಿ ಅವರನ್ನು ಅಭಿನಂದಿಸಿದ್ದಾರೆ.



# ಮಗನ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವಂತೆ ಮನವಿ

ಮದ್ದೂರು: ಮದ್ದೂರು ಟೌನ್‌ನಲ್ಲಿ ವಾಸವಾಗಿರುವ ಬೇಬಿ ಹಾಗೂ ಸತೀಶ್ ಅವರ ಮಗ ಯೋಗೇಶ್ ಎಂ.ಎಸ್. ವಿಲ್ಸನ್ ಕಾಯಿಲೆ ಎಂಬ ಅಪರೂಪದ ಖಾಯಿಲೆಯಿಂದ ಬಳಲುತ್ತಿದ್ದಾನೆ.



ಇದು ಲಿವರ್ (ಯಕೃತ್ತು ಮತ್ತು ನರಮಂಡಲದ ಮೇಲೆ ತೀವ್ರ ಪರಿಣಾಮ ಬೀರುವ ಖಾಯಿಲೆಯಾಗಿದ್ದು, ಇದಕ್ಕೆ ತುರ್ತು ಮತ್ತು ದೀರ್ಘಕಾಲದ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದೆ. ಇವರ ಕುಟುಂಬವು ಈವರೆಗೆ ಚಿಕಿತ್ಸೆಗಾಗಿ ನಮ್ಮ ಕೈಲಾದಷ್ಟು ಹಣವನ್ನು ಭರಿಸಿದ್ದೇವೆ. ಆದರೆ ಮುಂದಿನ ಹೆಚ್ಚಿನ ಚಿಕಿತ್ಸೆ ಮತ್ತು ಔಷಧಿಗಳ ವೆಚ್ಚವು ನಮ್ಮ ಶಕ್ತಿಯನ್ನು ಮೀರಿದೆ. ಚಿಕಿತ್ಸೆಯು ಸಕಾಲದಲ್ಲಿ ಮುಂದುವರಿಯದಿದ್ದರೆ ಅವನ ಆರೋಗ್ಯದ ಸ್ಥಿತಿ ಇನ್ನಷ್ಟು ಬಿಗಡಾಯಿಸುವ ಆತಂಕವಿದೆ. ಇದಕ್ಕೆ ಲಿವರ್ ಮರುಜೋಡಣೆ ಒಂದೇ ಪರಿಹಾರವೆಂದು ವೈದ್ಯರು ತಿಳಿಸಿದ್ದಾರೆ. ಅದಕ್ಕೆ ತಗಲುವ ವೆಚ್ಚ ಅಂದಾಜು 18 ರಿಂದ 20 ಲಕ್ಷ ರೂ.ಗಳು. ಆಗುವ ಸಾಧ್ಯತೆ ಇದೆ. ಆದ್ದರಿಂದ ಮಗನ ಆರ್ಥಿಕ ಸಹಾಯಕ್ಕೆ ದಂಪತಿಗಳು ಮನವಿ ಮಾಡಿದ್ದು, ನೀವು ನೀಡುವ ಸಣ್ಣ ಮೊತ್ತವೂ ಅವನ ಚೇತರಿಕೆಗೆ ದೊಡ್ಡ ಆಸರೆಯಾಗಲಿದೆ. ಇವರಿಗೆ ನೆರವು ನೀಡಲು ಇಚ್ಚಿಸುವವರು ಇವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಮಾಡಬಹುದು.

# ಗೋಪಾಲಸ್ವಾಮಿ ಬೆಟ್ಟದಲ್ಲಿ ವಿಶೇಷ ಪೂಜೆ



ಗುಂಡ್ಲುಪೇಟೆ: ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ತಂದೆಯಂತೆ ಸರಳವಾಗಿ ಸಮಾಜ ಮುಖಿ ಕೆಲಸಗಳ ಮೂಲಕ ಹುಟ್ಟುಹಬ್ಬ ಆಚರಿಸಲು ತೀರ್ಮಾನಿಸಿದ ಹಿನ್ನಲೆ ಅವರ ಬೆಂಬಲಿಗರು ಅಭಿಮಾನಿಗಳು ವಿವಿಧ ಸೇವಾ ಕಾರ್ಯ ಮಾಡುವ ಮೂಲಕ ಶಾಸಕ ಗಣೇಶ್ ಪ್ರಸಾದ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಶಾಸಕರ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿಗಳಿಂದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿ ನೂರಾರು ಭಕ್ತರಿಗೆ ಅನ್ನದಾನ ಮಾಡಲಾಯಿತು,,ಪಟ್ಟಣದ ವೃಥ್ವಿ ಬುದ್ದಿಮಾಂದ್ಯ ವಸತಿ ಶಾಲೆಯ ಬುದ್ದಿಮಾಂದ್ಯ ಮಕ್ಕಳಿಗೆ ಸಿಹಿ ವಿತರಣೆ ಹಾಗೂ ರೇಷನ್ ಕಿಟ್ ವಿತರಿಸಲಾಯಿತು, ಪಟ್ಟಣದ ತಾಯಿ ಮಕ್ಕಳ ಅಸ್ಪತ್ರೆ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡುವ ಮೂಲಕ ಹುಟ್ಟುಹಬ್ಬ ಆಚರಿಸಿದರು.

ಬೇಗೂರಿನಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ, ಭೋಗಯ್ಯನಹುಂಡಿ ಯಲ್ಲಿ ಉಚಿತ ಆರೋಗ್ಯ ಶಿಬಿರ, ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಬ್ಯಾಗ್ ವಿತರಣೆ, ನೋಟ್ ಬುಕ್ ವಿತರಣೆ ಮಾಡುವ ಮೂಲಕ ಆಚರಿಸಲಾ ಯಿತು, ನಂತರ ಪಟ್ಟಣದ ಡಿ ದೇವ ರಾಜ ಅರಸು ಕ್ರೀಡಾಂಗಣದಲ್ಲಿ 41 ಜೊತೆ ನಾಡಕುಸ್ತಿ ಕಾರ್ಯ ಕ್ರಮಕ್ಕೆ ಶಾಸಕ ಗಣೇಶ್ ಪ್ರಸಾದ್ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಅದಿ ಮೂಡ್ಲು ಹುಂಡಿ, ನಿಜಾಮುದ್ದೀನ್, ಅಜರ್ ಪಾಷ,ಮಣಿ ಮಡಹಳ್ಳಿ, ಇಲಿಯಾಸ್, ಸಾಹುಲ್, ಮೋಹನ್ ದಾಸ್, ಅರುಣ್, ವಿಸ್ವಾಸ್, ಪ್ರಮೋದ್, ಶ್ರೀನಿವಾಸ್ , ನರ ಸಿಂಹ, ಸೇರಿದಂತೆ ನೂರಾರು ಕಾರ್ಯ ಕರ್ತರು ಬೆಂಬಲಿಗರು ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡರು.

# ಸ್ವಯಂ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಸಹಕಾರಿ

ಮೈಸೂರು: ಶಿಕ್ಷಣ ಉದ್ಯೋಗಕ್ಕೆ ಸೀಮಿತವಾಗದೆ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಲು ಮತ್ತು ಸ್ವಯಂ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ಗ್ರಾಮಾಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಿದ್ದ 2025–26ನೇ ಸಾಲಿ ತಾಲ್ಲೂಕು ಮಟ್ಟದ ಪ್ರತಿಭಾಕಾರಂಜಿ ಹಾಗೂ ಕಲೋತ್ಸವ ಸಮಾರಂಭವನ್ನು ಶ್ರೀರಾಂಪುರ ನಿರ್ಮಲ ಪ್ರೌಢಶಾಲೆಯ ಆವರಣದಲ್ಲಿ ಉದ್ಘಾಟಿಸಿ ಮಾತನಾಡಿದರು. ಶಿಕ್ಷಕರು ಪ್ರಮುಖವಾಗಿ ಕಾರ್ಯ ನಿರ್ವಹಿಸಿ ಮಕ್ಕಳನ್ನು ಸಂಸ್ಕಾರಯುತ ಪ್ರಜೆಗಳನ್ನಾಗಿ ಮಾಡಲು ಸಾಕಷ್ಟು ಶ್ರಮಿಸುತ್ತಾರೆ. ಶಿಕ್ಷಕರು ಮೊದಲು ಸೈಕಲ್‌ನಲ್ಲಿ ಹೋಗುತ್ತಿದ್ದರು. ಈಗ ಗ್ರಾಮಾಂತರ ಪ್ರದೇಶಗಳಿಗೆ ಬಸ್,ವಾಹನಗಳ ವ್ಯವಸ್ಥೆ ಇದೆ.ಮೂಲ ಸೌಕರ್ಯವಿರುವ ಕಾರಣ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಉತ್ತಮ ಸಮಾಜ ನಿರ್ಮಾಣಕ್ಕೆ ಶಿಕ್ಷಕರ ಪಾತ್ರವಿದೆ. ಸಂಸ್ಕಾರಯುತ,ಸುಸಂಸ್ಕೃತ ಶಿಕ್ಷಣವನ್ನು ನೀಡುವ ಶಿಕ್ಷಕರು ಗುರುಗಳು ಆಗಿದ್ದಾರೆ ಎಂದರು.

ಗುರಿ ಮತ್ತು ಛಲದೊಂದಿಗೆ ಮುಂದಿನ ಭವಿಷ್ಯವನ್ನು ಕಂಡುಕೊಳ್ಳಬೇಕು. ಗುರಿ ಎನ್ನುವುದುಇದ್ದರೆ



ಯಾವುದನ್ನು ಬೇಕಾದರೂ ಸಾಧಿಸಬಹುದು. ಮನೆಯಲ್ಲಿ ಸ್ವಚ್ಚತೆ,ಪರಿಸರ ಕಾಪಾಡಿಕೊಂಡರೆ ಇಡೀ ಬೀದಿ, ಊರನ್ನು ಕಾಪಾಡಬಹುದು. ಶಾಲೆಯಲ್ಲಿ ಮರಗಿಡಗಳನ್ನು ಬೆಳೆಸಿದರೆ ಶಾಲೆ,ರಸ್ತೆಗಳಲ್ಲೂ ನೆಟ್ಟು ಪೋಷಿಸಬೇಕು ಎಂದರು. ಪ್ರತಿಭಾ ಕಾರಂಜಿಯು ಮಕ್ಕಳ ವಿಕಸನಕ್ಕೆ ಸಹಕಾರಿಯಾಗಿದೆ. ವರ್ಷಕ್ಕೊಂದುದಿನ ನಡೆಯುವ ಈ ಕಾರ್ಯಕ್ರಮವು ಪೋಷಕರಿಗೆ ಸಂತೋಷ,ಮಕ್ಕಳಿಗೆ ಸ್ಫೂರ್ತಿ ಸಿಗುತ್ತದೆ. ಮತ್ತಷ್ಟು ಚೆನ್ನಾಗಿ ಮಾಡಬೇಕೆಂಬ ಆತ್ಮವಿಶ್ವಾಸ ಮೂಡುತ್ತದೆ. ಶಿಕ್ಷಣ ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದ್ದು, ಅದರಂತೆ ಕಲೋತ್ಸವ ಕೂಡ ಒಂದಾಗಿದೆ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಮಾಲೇಗೌಡ, ನಿರ್ಮಲ ಪ್ರೌಢಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಜೂಲಿ ಹಾಜರಿದ್ದರು.

## ಕರವೇ ಜಿಲ್ಲಾ ಅಧ್ಯಕ್ಷ ಡಿ.ಎಸ್.ವೇಣು ಹೋರಾಟ ಎಚ್ಚರಿಕೆ

# ಎಪಿಎಂಸಿ ಮಳಿಗೆಗಳ ಹರಾಜಿಗೆ ಆಗ್ರಹ

ಕೆ.ಆರ್.ಪೇಟೆ: ಪಟ್ಟಣದ ಎಪಿಎಂಸಿ ಮಳಿಗೆಗಳನ್ನು ನಿಯಮಾನುಸಾರ ಬಹಿರಂಗ ಹರಾಜು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಎಸ್.ವೇಣು ಹೋರಾಟ ಎಚ್ಚರಿಕೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಕೆ.ಆರ್.ಪೇಟೆ ಎಪಿಎಂಸಿ ವಾಣಿಜ್ಯ ಬಳಗೆಗಳನ್ನು ಬಲಾಡ್ಯರು ಹಲವಾರು ವರ್ಷ ಗಳಿಂದ ಇಲಾಖೆಯ ನಿಯಮ ಮೀತಿ ಹರಾಜು ಪ್ರಕ್ರಿಯೆ ನಡೆಸಿಕೊಂಡು ಬಂದಿದ್ದಾರೆ ಇದರ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಕರ್ನಾಟಕ ರಕ್ಷಣಾ ವೇದಿಕೆ ಹಲವು ಬಾರಿ ಮನವಿ ಮಾಡಿದರು ಕೂಡ ಸಂಬಂಧ ಪಟ್ಟ ಅಧಿಕಾರಿಗಳು ಬಹಿರಂಗ ಹರಾಜು ಮಾಡದೆ, ಬಾಡಿಗೆ ವಸೂಲಾತಿ ಆಗದೇ ಇಲಾಖೆಗೆ ಸರಿಯಾದ ಆದಾಯವು ಇಲ್ಲದಂತಾಗಿದೆ. ಅಧಿಕಾರಿಗಳು ಗೌಪ್ಯ ವಾಗಿ ಬಾಡಿಗೆ ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸಿ ಇಲಾಖೆಗೆ ವಂಚಿಸುತ್ತಿದ್ದಾರ....? ಎಂಬ ಸಂಶಯ ಕಾಡುತ್ತಿದೆ



ಇದಕ್ಕೆ ಉದಾಹರಣೆ ಡಿ.2 ನಡೆಯಲಿರುವ ಬಹಿರಂಗ ಹರಾಜು ಪ್ರಕ್ರಿಯೆ ಬಗ್ಗೆ ಯಾರಿಗೂ ಮಾಹಿತಿ ತಿಳಿಯಬಾರದು ಎಂದು ಪ್ರಚಲಿತ ಪ್ರಚಾರ ಮಾಡುವ ರಾಜ್ಯ ಮಟ್ಟ ಹಾಗೂ ಪ್ರಾದೇಶಿಕ ಪತ್ರಿಕೆಗಳಿಗೆ ಪ್ರಕಟಣೆ ನೀಡದೆ ಬಲಾಡ್ಯರ ಅನುಕೂಲವಾಗುವ ರೀತಿಯಲ್ಲೇ ಸಂಬಂಧಪಟ್ಟ ಅಧಿಕಾರಿಗಳು ಹರಾಜು ಪ್ರಕ್ರಿಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದ ಕರವೇ ಜಿಲ್ಲಾ ಅಧ್ಯಕ್ಷ ಡಿ.ಎಸ್ ವೇಣು,ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮೇಲಧಿಕಾರಿಗಳು ಮುತುವರ್ಜಿ ವಹಿಸಿ ತಮ್ಮ ಪ್ರಾಗಂಣದಲ್ಲಿರುವ ವಾಣಿಜ್ಯ ಮಳಿಗೆಗ ಳನ್ನು ಅಧಿಕಾರ ವ್ಯಾಪ್ತಿ ಮೀರಿ ಕಾನೂನು ಬಾಹಿರ ಹರಾಜು ಪ್ರಕ್ರಿಯೆಯನ್ನು ನಡೆಸದೇ, ನಿಯಮದ ಪ್ರಕಾರ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಕೈಗೊಂಡು ಹಲವು ವರ್ಷಗಳಿಂದ ಬಲಾಢ್ಯರ ಕೈಯಲ್ಲಿ ಇರುವ ಬಳಕೆಗಳನ್ನ ಅರ್ಹ ಫಲಾನುಭವಿಗಳಿಗೂ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಿಯಮದ ಪ್ರಕಾರ ಹರಾಜು ಪ್ರಕ್ರಿಯೆ ಮಾಹಿತಿಯನ್ನು ಪ್ರತಿ ಒಬ್ಬ ಜನಸಾಮಾನ್ಯರಿಗೂ ತಿಳಿಯುವಂತೆ ಪತ್ರಿಕೆ ಪ್ರಕಟಣೆ ತಿಳಿಸಬೇಕು ಎಂದ ಅವರು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟದ ಮೂಲಕ ಎಚ್ಚರಿಸಬೇಕಾಗುತ್ತದೆ ಎಂದು ಕರವೇ ಜಿಲ್ಲಾ ಅಧ್ಯಕ್ಷ ಡಿ.ಎಸ್ ವೇಣು ಆಗ್ರಹಿಸಿ ಹೋರಾಟದ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಕರವೇ ಕೆ.ಆರ್.ಪೇಟೆ ನಗರ ಘಟಕದ ಅಧ್ಯಕ್ಷ ಮದನ್,ಕಸಬಾ ಹೋಬಳಿ ಅಧ್ಯಕ್ಷ ಕೊಮ್ಮೆನಹಳ್ಳಿ ಅನಿಲ್,ಹೊಸಹೊಳಲು ಗೋಪಿ , ಸೇರಿದಂತೆ ಉಪಸ್ಥಿತರಿದ್ದರು.

# ಬಾಲಸಂಗಮದಲ್ಲಿ ಮಕ್ಕಳ ಕಲರವ



**ಮಡಿಕೇರಿ:** ನಗರದ ಬಾಲಗೋಕುಲ ಹಾಗೂ ಮುಳಿಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಡಿಸೆಂಬರ್ 25 ರಂದು ಆಯೋಜಿಸಲಾಗಿದ್ದ "ಬಾಲಸಂಗಮ" ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು. ನಗರದ ಮುಳಿಯ ಜ್ಯುವೆಲ್ಸ್ ಸಭಾಂಗಣದಲ್ಲಿ ನಡೆದ ಈ ಸಮಾರಂಭವು ಮಕ್ಕಳ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಒಂದು ಸಶಕ್ತ ಸಾಂಸ್ಕೃತಿಕ ವೇದಿಕೆಯಾಗಿ ಮೂಡಿಬಂದಿತು.

**ದೀಪ ಬೆಳಗುವ ಮೂಲಕ ಚಾಲನೆ:** ಮಧ್ಯಾಹ್ನ 2:00 ಗಂಟೆಗೆ ಕಾರ್ಯಕ್ರಮವು ಸಾಂಪ್ರದಾಯಿಕವಾಗಿ ಚಾಲನೆ ಪಡೆಯಿತು. ಮುಳಿಯ ಜ್ಯುವೆಲ್ಸ್‌ನ ವ್ಯವಸ್ಥಾಪಕರಾದ ಚಂದ್ರಶೇಖರ್ ಬಿ.ವಿ. ಅವರು ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಮಕ್ಕಳ ಸರ್ವತೋಮುಖ ಏಳಿಗೆಯಲ್ಲಿ ಇಂತಹ ಮೌಲ್ಯಾಧಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳ ಅಗತ್ಯತೆಯನ್ನು ಒತ್ತಿ ಹೇಳಿದರು. ಮುಳಿಯ ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಬಾಲಗೋಕುಲದ ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ವಂದೇ ಮಾತರಂ ಇತಿಹಾಸದ ಮೆಲುಕು:** ಕಾರ್ಯಕ್ರಮದಲ್ಲಿ ಪಿ.ಎಂ. ರವಿಯವರು ರಾಷ್ಟ್ರೀಯ ಗೀತೆ 'ವಂದೇ ಮಾತರಂ'ನ ಭವ್ಯ ಇತಿಹಾಸದ ಕುರಿತು ವಿಶೇಷ ಉಪನ್ಯಾಸ ನೀಡಿದರು. ವಂದೇ ಮಾತರಂ ಗೀತೆಯು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದೇಶಭಕ್ತರಿಗೆ ಹೇಗೆ ಸ್ಫೂರ್ತಿಯ ಸೆಲೆಯಾಗಿತ್ತು ಎಂಬುದನ್ನು ವಿವರಿಸಿದ ಅವರು, "ಹೆಜ್ಜೆಗಳು 150" ವರ್ಷಗಳ ಸಂಭ್ರಮದ ಮಹತ್ವವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ಈ ಗೀತೆಯ ಉಗಮ ಮತ್ತು ಅದು ಭಾರತೀಯರಲ್ಲಿ ಮೂಡಿಸಿದ ರಾಷ್ಟ್ರಪ್ರೇಮದ ಕಿಚ್ಚಿನ ಬಗ್ಗೆ ಅವರು ಹಂಚಿಕೊಂಡ ಮಾಹಿತಿ ಸ್ಫೂರ್ತಿದಾಯಕವಾಗಿತ್ತು.

**ಸಾಂಸ್ಕೃತಿಕ ಮತ್ತು ಪ್ರತಿಭಾ ಪ್ರದರ್ಶನ:** 6 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಅವರ ಆಸಕ್ತಿ ಮತ್ತು ವಯೋಮಾನಕ್ಕೆ ಅನುಗುಣವಾಗಿ ವೇದಿಕೆಯನ್ನು ಕಲ್ಪಿಸಲಾಗಿತ್ತು. ಪುಟಾಣಿ ಮಕ್ಕಳು ರಾಷ್ಟ್ರೀಯ ಗೀತೆ ವಂದೇ ಮಾತರಂ ಗಾಯನ, ದೇಶಭಕ್ತಿ ಗೀತೆಗಳು, ಶ್ಲೋಕ ಪಠಣ, ಕುಣಿತ ಭಜನೆ ಹಾಗೂ ವಿವಿಧ ರೀತಿಯ ಮನೋಲ್ಲಾಸದ ಆಟಗಳಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿದರು. ಇದರೊಂದಿಗೆ ಮಹಾಭಾರತ ಗ್ರಂಥ ಪಠಣದಿಂದ ಆಗುವ ಪ್ರಯೋಜನದ ಬಗ್ಗೆಯೂ ತಿಳುವಳಿಕೆ ನೀಡಲಾಯಿತು. ಬಾಲಗೋಕುಲದಲ್ಲಿ ಕಲಿತ ಸಂಸ್ಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳು ಮಕ್ಕಳ ಪ್ರತಿಯೊಂದು ಪ್ರದರ್ಶನದಲ್ಲೂ ಎದ್ದು ಕಾಣುತ್ತಿತ್ತು.

**ಕಾರ್ಯಕ್ರಮದ ಯಶಸ್ವಿ ನಿರ್ವಹಣೆ:** ಬಾಲಗೋಕುಲದ ಸಮರ್ಪಿತ ಕಾರ್ಯಕರ್ತರಾದ ಜಯಾ ಪಾಲಾಕ್ಷ, ರಾಣಿ ಅರುಣ್, ಗೌರಮ್ಮ, ದೀಕ್ಷಾ, ಆಶಾ ಮತ್ತು ಗೀತಾ ಮೂರ್ತಿ ಅವರು ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಅಚ್ಚುಕಟ್ಟಾಗಿ ನಿರ್ವಹಿಸಿದರು.

**ಮುಳಿಯ ಪ್ರತಿಷ್ಠಾನದ ಉದಾತ್ತ ಸಹಯೋಗ:** ಸಮಾಜಮುಖಿ ಕಾರ್ಯಗಳಲ್ಲಿ ಸದಾ ಮುಂಚೂಣಿಯಲ್ಲಿರುವ ಮುಳಿಯ ಪ್ರತಿಷ್ಠಾನವು, ಈ ಬಾರಿಯ ಬಾಲಸಂಗಮಕ್ಕೆ ತನ್ನ ಸುಸಜ್ಜಿತ ಸಭಾಂಗಣ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳ ಪ್ರತಿಭೆಗೆ ಬೆನ್ನೆಲುಬಾಗಿ ನಿಂತಿತು. ಪ್ರತಿಷ್ಠಾನದ ಈ ಜನಪರ ಕಾಳಜಿ ಮತ್ತು ಸಹಕಾರಕ್ಕೆ ಪೋಷಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಯಿತು.

**ಸಮಾರೋಪ:** ಸಂಜೆ 5:00 ಗಂಟೆಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರೋತ್ಸಾಹದಾಯಕ ಬಹುಮಾನ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ರಜಾ ದಿನದ ಸಂಭ್ರಮದಲ್ಲಿ ಮಕ್ಕಳಿಗಾಗಿ ಆಯೋಜಿಸಲಾದ ಈ ಅರ್ಥಪೂರ್ಣ ಕಾರ್ಯಕ್ರಮವು ಮಡಿಕೇರಿಯ ಸಾಂಸ್ಕೃತಿಕ ಹಿರಿಮೆಗೆ ಮತ್ತೊಂದು ಗರಿ ಇಟ್ಟಂತಾಯಿತು. ಒಟ್ಟಾರೆಯಾಗಿ, ಮಡಿಕೇರಿ ಬಾಲಗೋಕುಲದ ಶಿಸ್ತು ಮತ್ತು ಮುಳಿಯ ಪ್ರತಿಷ್ಠಾನದ ಔದಾರ್ಯದ ಸಮ್ಮಿಲನದಿಂದ ಮೂಡಿಬಂದ "ಬಾಲಸಂಗಮ"ವು ಮಕ್ಕಳಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬುವಲ್ಲಿ ಸಂಪೂರ್ಣ ಯಶಸ್ವಿಯಾಯಿತು.

# ಡಿ.30ರಂದು ವಿಶೇಷ ಪೂಜೆ–ವೈಕುಂಠದ ದ್ವಾರ ಪ್ರವೇಶ ಧಾರ್ಮಿಕ ಕಾರ್ಯ

**ಮದ್ದೂರು:** ತಾಲ್ಲೂಕಿನ ಭಾರತೀ ನಗರದಲ್ಲಿರುವ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆ ಹಾಗೂ ವೈಕುಂಠದ ದ್ವಾರ ಪ್ರವೇಶ ಧಾರ್ಮಿಕ ಕಾರ್ಯವನ್ನು ಡಿ.30ರ ಮಂಗಳವಾರದಂದು ಆಯೋಜಿಸಲಾಗುತ್ತದೆ ಎಂದು ದೇವಾಲಯದ ಟ್ರಸ್ಟಿ ವೆಂಕಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ದೇವಾಲಯ ನಿರ್ಮಾಣಗೊಂಡು 4 ವರ್ಷಗಳು ಸವಿನೆನಪಿಗೆ ವಿಶೇಷ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಡಿ.30 ರ ಮಂಗಳವಾರದಂದು ಬೆಳಗ್ಗೆ 4.30 ರಿಂದ ರಾತ್ರಿ 10 ರವರೆಗೆ ವೈಕುಂಠ ದ್ವಾರ ಪ್ರವೇಶ, ಭಕ್ತರಿಗೆ ಸಮರ್ಪಣೆ ಆಗಲಿದೆ ಎಂದರು.

ಡಿ.29 ರ ಸೋಮವಾರದಂದು ಸಂಜೆ 6.30 ಗಂಟೆಗೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಆಭರಣ ಹಾಗೂ ಹೂವಿನ ಅಲಂಕಾರ ಆಯೋಜಿಸಲಾಗಿದ್ದು, ಮಂಗಳವಾರ ಬೆಳಗ್ಗೆ 4 ಗಂಟೆಗೆ ಆರಂಭವಾಗುವ ಸುಪ್ರಭಾತ ಸೇವೆ, 4.30 ಕ್ಕೆ ನಿತ್ಯ ಆರಾಧನೆ, 5 ಗಂಟೆಗೆ ವೈಕುಂಠ ದ್ವಾರ ಪೂಜೆ ನಂತರ ಮಹಾ ಮಂಗಳಾರತಿ ಹಾಗೂ ಫಲಾಮೃತವನ್ನು ಭಕ್ತಾದಿಗಳಿಗೆ ವಿತರಿಸಲಾಗುವುದು ಎಂದರು.

ವೈಕುಂಠ ಏಕಾದಶಿಯ ವಿಶೇಷಪೂಜೆಗೆ ಕೆಂಗೇರಿಯ ವಿಶ್ವ ಒಕ್ಕಲಿಗರ ಸಂಸ್ಥಾನ ಪೀಠಾಧಿಪತಿ ಶ್ರೀನಿಶ್ಚಲಾನಂದ ಸ್ವಾಮೀಜಿ ದಿವ್ಯಾ ಸಾನಿಧ್ಯದಲ್ಲಿ ಮೇಲುಕೋಟೆಯ ಆಗಮ ಪ್ರವೀಣ ಡಾ.ಸೆಲ್ವಪಿಳ್ಳೈ ಅಯ್ಯಂಗಾರ್, ದೇವಾಲಯದ ಅರ್ಚಕ ಅನಂತ ಕೃಷ್ಣಭಟ್ಟರ್, ನರಸಿಂಹಭಟ್, ವಾಸ್ತು ಪ್ರವೀಣ ಯು.ವಿ.ಗಿರೀಶ್ ಆಗಮಿಸಲಿದ್ದಾರೆಂದು ತಿಳಿಸಿದರು.

ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ವಾದ್ಯಗೋಷ್ಠಿ, ಭಜನೆ, ಭರತ ನಾಟ್ಯ, ಭಕ್ತಿಗೀತಾ ಪ್ರವಚನ ಹಾಗೂ ಶ್ರೀನಿವಾಸ ಕಲ್ಯಾಣ ಪೌರಾಣಿಕ ನಾಟಕ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುಮಾರು 25 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳುವ ಎಲ್ಲ ಭಕ್ತರಿಗೆ ಕಜ್ಜಾಯ, ಬಾಳೆಹಣ್ಣು ಹಾಗೂ ಹಾಲಿನ ಫಲಾಮೃತ ವಿತರಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ದೇವಾಲಯ ಸಮಿತಿ ಅಧ್ಯಕ್ಷ ವೆಂಕಟೇಗೌಡ, ಕಾರ್ಯದರ್ಶಿ ನಾಗಪ್ಪ, ಟ್ರಸ್ಟಿಗಳಾದ ಶ್ರೀನಿವಾಸ್, ತಿಮ್ಮರಾಜು ಉಪಸ್ಥಿತರಿದ್ದರು.



# ಹಾಸನ ಜಿಲ್ಲಾ ಕಲಾವಿದರ ಹಿತರಕ್ಷಣಾ ಸಮಿತಿಯ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ



**ಹಾಸನ:** ನಗರ ಹಾಸನಾಂಬ ಕಲಾಕ್ಷೇತ್ರದಲ್ಲಿ ಸ್ಥಳೀಯ ಶ್ರೀ ಅನ್ನಪೂರ್ಣೇಶ್ವರಿ ಕಲಾ ಸಂಘವು ಹಮ್ಮಿ ಕೊಂಡಿರುವ ನಾಲ್ಕು ದಿನಗಳ ನಾಟಕೋತ್ಸವದಲ್ಲಿ 2ನೇ ದಿನ ಶುಕ್ರವಾರ ಪ್ರದರ್ಶಿತವಾದ ದಕ್ಷಯಜ್ಞ ನಾಟಕ ಪ್ರದರ್ಶನದ ವೇದಿಕೆ ಕಾರ್ಯಕ್ರಮದಲ್ಲಿ ಹಾಸನ ಜಿಲ್ಲಾ ಕಲಾವಿದರ ಹಿತರಕ್ಷಣಾ ಸಮಿತಿಯು ಹೊರ ತಂದಿರುವ 2026ರ ಹೊಸ ವರ್ಷದ ಕ್ಯಾಲೆಂಡರ್ ನ್ನು ಬಿಡುಗಡೆ ಮಾಡಲಾಯಿತು. ಜಿಲ್ಲಾ ಕಲಾವಿದರ ಹಿತರಕ್ಷಣಾ ಸಮಿತಿ ಅಧ್ಯಕ್ಷ ರವಿಕುಮಾರ್ ಬಿದರೆ, ಕಾರ್ಯಾಧ್ಯಕ್ಷ ಡಿ.ವಿ.ನಾಗಮೋಹನ್, ಖಜಾಂಚಿ ರಮೇಶ್ ಗೌಡಪ್ಪ, ಉಪಾಧ್ಯಕ್ಷರು ಸಿ.ಎಂ.ಶ್ರೀಕಂಠಪ್ಪ, ಪ್ರ.ಕಾರ್ಯದರ್ಶಿ ವೇದ ಶಿವಕುಮಾರ್, ವಕೀಲರು ಐ.ಎ.ಮಹೇಂದ್ರ, ವಿಶ್ವನಾಥಗೌಡ ಬಿ.ಕೆ. ತಿಮ್ಮೇಗೌಡರು ಎಂ.ಟಿ. ಸಲಹೆಗಾರರು ಕೆ.ಕೆ.ರಂಗಸ್ವಾಮಿ, ಸಂಚಾಲಕರು ನಾಗರಾಜ್ ಸಹ ಸಂಚಾಲಕರು ಟಿ. ವಿ. ನಾಗರಾಜ್, ನಿರ್ದೇಶಕರು ಹೆಚ್.ಎಂ.ಪ್ರಭಾಕರ್, 'ಮಹಿಳಾ ನಿರ್ದೇಶಕರು ಸಾವಿತ್ರಿ ಗಂಗಾಧರ್, ಸಾಹಿತಿ ಗೊರೂರು ಅನಂತರಾಜು, ಕಲಾವಿದರು ಯರೇಹಳ್ಳಿ ಮಂಜೇಗೌಡರು, ಸಿಗರನಹಳ್ಳಿ ಚಂದ್ರಶೇಖರ್,.ಜಗದೀಶ್ ರಾಮಘಟ್ಟ, ಗ್ಯಾರಂಟಿ ರಾಮಣ್ಣ, ಶಶಿಕುಮಾರ್ ಸಾಲಗಾಮೆ, ನಾಟಕ ನಿರ್ದೇಶಕರು ಎ.ಸಿ. ರಾಜು, ವಿಷ್ಣುವರ್ಧನ್ ಸಂಘದ ಅಧ್ಯಕ್ಷರು ಮಹಾಂತೇಶ್, ಸೀನ್ಸ್ ಮಾಲೀಕರು ಲಕ್ಷಣ್ ಕಡಗ, ನಿ. ಪ್ರಾಧ್ಯಾಪಕರು ಎ ಹೆಚ್ ಗಣೇಶ್ ಅಂಕ ಪುರ, ಕಾರ್ಲೆ ಗೋವಿಂದೇಗೌಡರು, ರಾಜಶೇಖರ್, ಕಲಾವಿದೆ ಮಂಜುಳ ಉಮೇಶ್ ವೇದಿಕೆಯಲ್ಲಿ ಇದ್ದಾರೆ.

# ಪತ್ರಕರ್ತರ ಭವನ ನಿರ್ಮಾಣಕ್ಕೆ ಸಚಿವ ರಾಮಲಿಂಗಾರೆಡ್ಡಿಯವರಿಂದ ಭೂಮಿ ಪೂಜೆ



**ರಾಮನಗರ:** ರಾಮನಗರ/ಮಾಗಡಿ: ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲೆಗಳಲ್ಲಿ ಪತ್ರಿಕಾಭವನಗಳ ನಿರ್ಮಾಣ ಅವಶ್ಯಕ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಪ್ರತಿಪಾದಿಸಿದರು.

ಮಾಗಡಿ ಪಟ್ಟಣದ ಗುಂಡಯ್ಯನಬಾವಿ ಎದುರು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪತ್ರಿಕಾ ಭವನ ಹಾಗೂ ಕನ್ನಡ ಭವನದ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಪತ್ರಿಕಾ ಭವನ ಹಾಗೂ ಕನ್ನಡ ಭವನಕ್ಕೆ ಸೂಕ್ತ ನಿವೇಶನ ಕೊಡಿಸುವ ಮೂಲಕ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಪತ್ರಕರ್ತರಿಗೆ ಸಹಕಾರ ನೀಡಿದ್ದಾರೆ ಎಂದು ಶ್ಲಾಘಿಸಿದರು.


ಪತ್ರಕರ್ತರು ಬಸ್ಸುಗಳಲ್ಲಿ ಸಂಚರಿಸಲು ತಾವು ಸಹ ಸಾರಿಗೆ ಸಚಿವರಾಗಿ ಉಚಿತ ಬಸ್ಸು ಪಾಸ್ ವ್ಯವಸ್ಥೆ ಕಲ್ಪಿಸಿದ್ದೇನೆ. ಆರೋಗ್ಯ ವಿಮೆ ಮಾಡಲು ಚಿಂತಿಸಲಾಗಿದೆ ಎಂದರು.

ಶಾಸಕ ಎಚ್.ಸಿ.ಬಾಲಕೃಷ್ಣ ಮಾತನಾಡಿ, ಹಲವು ವರ್ಷಗಳಿಂದಲೂ ಪತ್ರಕರ್ತರ ಭವನ ನಿರ್ಮಿಸಿಕೊಡುವಂತೆ ಪತ್ರಕರ್ತರು ಬೇಡಿಕೆ ಇಟ್ಟಿದ್ದರು. ಅವರ ಮನವಿಗೆ ಸ್ಪಂದಿಸಿದ್ದೇನೆ. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ಕೆ.ರಾಮು ಹಾಗೂ ಇತರ ಪತ್ರಕರ್ತರು ನನ್ನ ಬೆನ್ನು ಹತ್ತಿದ್ದರು. ಒಳ್ಳೆಯ ಸ್ಥಳವನ್ನೇ ಗುರುತಿಸಿ ಕನ್ನಡ ಭವನ ಮತ್ತು ಪತ್ರಕರ್ತರ ಭವನ ನಿರ್ಮಾಣಕ್ಕೆ ಸಂಘಕ್ಕೆ ಮಂಜೂರಾತಿ ಕೊಡಿಸಿದ್ದೇನೆ. ಕಟ್ಟಡ ನಿರ್ಮಾಣಕ್ಕೆ 2.5 ಕೋಟಿ ರೂ ಅನುದಾನ ಮಂಜೂರಾಗಿದೆ ಎಂದರು.

ಮಾಗಡಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ಕೆ.ರಾಮು ಮಾತನಾಡಿ, ಶಾಸಕ ಎಚ್.ಸಿ.ಬಾಲಕೃಷ್ಣ, ಎಚ್.ಎನ್.ಅಶೋಕ, ಪುರಸಭೆಯ ಸದಸ್ಯರು, ಮುಖ್ಯಾಧಿಕಾರಿ ಸಿಬ್ಬಂದಿಗಳಾದ ರವಿ, ಶಾಸಕರ ಆಪ್ತ ಸಹಾಯಕ ವೆಂಕಟೇಶ್ ಹಾಗೂ ಕೃಷಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಶಿವಶಂಕರ್ ಅವರು ನೀಡಿದ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಬಿಡಿಸಿಸಿ ಬ್ಯಾಂಕ್ ಜಿಲ್ಲಾಧ್ಯಕ್ಷ ಎಚ್.ಎನ್.ಅಶೋಕ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಟಿ.ಶಿವರಾಜು, ಮಾಗಡಿ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎಂ.ಶ್ರೀನಿವಾಸ್, ಉಪಾಧ್ಯಕ್ಷ ಜಿ.ನರಸಿಂಹಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ನಾಗೇಶ್, ತಾಲೂಕು ಅಧ್ಯಕ್ಷ ತಿ.ನಾ. ಪದ್ಮನಾಭ್, ಪುರಸಭಾಧ್ಯಕ್ಷ ಶಿವರುದ್ರಮ್ಮ ವಿಜಯಕುಮಾರ್, ರಮ್ಯಾ ನರಸಿಂಹಮೂರ್ತಿ, ಶಿವಪ್ರಸಾದ್, ಎಂ.ಆರ್. ಮಂಜುನಾಥ್, ಟಿ.ಆರ್.ರಾಮಕೃಷ್ಣಯ್ಯ, ಶಿವಕುಮಾರ್, ಕಡೆಮನೆ ಕುಮಾರ್ ಇತರರು ಇದ್ದರು.

# ಡಿ.29 ರಂದು ವಿಶ್ವಮಾನವ ದಿನಾಚರಣೆ



**ಮಂಡ್ಯ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅರ್ಕೇಶ್ವರನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವತಿಯಿಂದ ವಿಶ್ವಮಾನವ ದಿನಾಚರಣೆಯನ್ನು ಡಿಸೆಂಬರ್ 29 ರಂದು ಬೆಳಿಗ್ಗೆ 11:00 ಗಂಟೆಗೆ ಅರ್ಕೇಶ್ವರನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಆರ್.ಎ.ಪಿ.ಸಿ.ಎಸ್ ಆವರಣದಲ್ಲಿರುವ ಕುವೆಂಪುರವರ ಪ್ರತಿಮೆಗೆ ಬೆಳಿಗ್ಗೆ 9 ಗಂಟೆಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಉಪಸ್ಥಿತಿ ವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ.

ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ. ಮೂರ್ತಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್. ಕೃಷ್ಣ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸಿ.ಬಸವೇಗೌಡ ಭಾಗವಹಿಸಲಿದ್ದಾರೆ ಹಾಗೂ ಉಪನ್ಯಾಸಕರು ಮತ್ತ ಕವಿಗಳಾದ ಕೆ.ಪಿ ಮೃತ್ಯುಂಜಯ ಅವರು ಉಪನ್ಯಾಸ ನೀಡಲಿದ್ದಾರೆ.

# ಡಿ.28 ರಂದು ಸಂಪದ ಫೌಂಡೇಶನ್ ಉದ್ಘಾಟನೆ–ಕ್ಯಾಲೆಂಡರ್ ಬಿಡುಗಡೆ





**ಬೆಂಗಳೂರು:** ಸಂಪದ ಫೌಂಡೇಶನ್ ಮತ್ತು ಪ್ರಗತಿ ಸೇವಾ ಟ್ರಸ್ಟ್ ವತಿಯಿಂದ , ಸಂಪದ ಫೌಂಡೇಶನ್ ಉದ್ಘಾಟನೆ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭ , ಕಾಯಕಯೋಗಿ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ಉಚಿತ ಪಂಚಗವ್ಯ ಚಿಕಿತ್ಸಾ ಶಿಬಿರವನ್ನು ಡಿ.28 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕೆ ಆರ್ ಪೇಟೆ ತಾಲೂಕು ಬೆಡದಹಳ್ಳಿಯಲ್ಲಿರುವ ಪಂಚಭೂತೇಶ್ವರ ಮಠದ ಆವರಣದಲ್ಲಿ ನಡೆಯಲಿದೆ ಎಂದು ಪ್ರಗತಿ ಸೇವಾ ಟ್ರಸ್ಟ್ ನ ಸಂಸ್ಥಾಪಕರಾದ ಡಾ.ನಾಗೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು , ಕಾರ್ಯಕ್ರಮದ ಸಾನಿಧ್ಯವನ್ನು ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಶ್ರೀ ಶ್ರೀ ಡಾ.ನಿಶ್ಚಲಾನಂದ ಸ್ವಾಮೀಜಿ , ಪಂಚಭೂತೇಶ್ವರ ಮಠದ ಶ್ರೀ ಶ್ರೀ ರುದ್ರಮುನಿ ಸ್ವಾಮೀಜಿ ವಹಿಸುವರು , ಕರ್ನಾಟಕ ದಕ್ಷಿಣ ಪ್ರಾಂತ ಗೋ ಸೇವಾ ಗತಿವಿಧಿಯ ಪ್ರವೀಣ್ ಸರಳಾಯ ಕಾರ್ಯಕ್ರಮವನ್ನು ಉದ್ಘಾಟಿಸುವರು , ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಗತಿ ಸೇವಾ ಟ್ರಸ್ಟ್ ನ ಸಂಸ್ಥಾಪಕರಾದ ಡಾ.ನಾಗೇಶ್ ವಹಿಸುವರು ಎಂದು ಹೇಳಿದರು.

ಸಂಪದ ಫೌಂಡೇಶನ್ ಸಂಸ್ಥಾಪಕರಾದ ಪುನೀತ್ , ಜೈಮಾರುತಿ ಸೇವಾ ಟ್ರಸ್ಟ್ ಸಂಸ್ಥಾಪಕರಾದ ಮಾದೇಗೌಡ , ಕರ್ನಾಟಕ ಸೇನಾ ಪಡೆಯ ರಾಜ್ಯಾಧ್ಯಕ್ಷರಾದ ಚಾ.ರಂ.ಶ್ರೀನಿವಾಸಗೌಡ ಪಾಂಡವಪುರ ಸರ್ಕಾರೀ ನೌಕರರ ಸಂಘದ ಮಾಜಿ ಅಧ್ಯಕ್ಷ ಎಂ.ಎನ್.

ವೆಂಕಟೇಶ್ , ಕ್ಯಾನ್ಸರ್ ರೋಗ ತಜ್ಞರಾದ ಡಾ.ಡಿ.ಪಿ.ರಮೇಶ್ , ನಂಜನಗೂಡು ಪಾರಂಪರಿಕ ವೈದ್ಯರಾದ ಈಶ್ವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ವಿವರಿಸಿದರು. ಉಚಿತ ಪಂಚಗವ್ಯ ಚಿಕಿತ್ಸಾ ಶಿಬಿರದಲ್ಲಿ ಕ್ಯಾನ್ಸರ್ , ಕಿಡ್ನಿ ವೈಫಲ್ಯ , ಶುಗರ್ , ಮಂಡಿನೋವು , ಥೈರಾಡ್ , ಮೈಗ್ರೇನ್ ಹಾಗೂ ಇನ್ನಿತರ ಚಿಕಿತ್ಸೆ ದೊರೆಯಲಿದೆ ಎಂದು ಇದೆ ಸಂದರ್ಭದಲ್ಲಿ ತಿಳಿಸಿದರು. ಗೋಷ್ಠಿಯಲ್ಲಿ ಸಿ.ಜಿ.ಪುನೀತ್, ಮಂಜುನಾಥ್, ಮಾದೇಗೌಡ ಇದ್ದರು.

# ಬಿಡದಿ ರೈಲು ನಿಲ್ದಾಣ ಶೀಘ್ರದಲ್ಲೇ ಮೇಲ್ದರ್ಜೆಗೆ: ವಿ. ಸೋಮಣ್ಣ



**ರಾಮನಗರ:** ಅಭಿವೃದ್ಧಿ ಹೊಂದಿರುವ ಬೆಂಗಳೂರಿನ ಒತ್ತಡ ಕಡಿಮೆ ಮಾಡಲು ಬಿಡದಿ–ರಾಮನಗರ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಕೇಂದ್ರದ ರೈಲ್ವೇ ಮತ್ತು ಜಲಶಕ್ತಿ ಖಾತೆಯ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ತಿಳಿಸಿದರು.

ಅವರು ಡಿ.26ರ ಶುಕ್ರವಾರ ಬಿಡದಿಯ ರೈಲು ನಿಲ್ದಾಣದ ಪರಿವೀಕ್ಷಣೆ ನಡೆಸಿದ ನಂತರ ಮಾತನಾಡಿದರು.

2026ರ ಮಾರ್ಚ್ ಅಂತ್ಯದೊಳಗೆ ಬಿಡದಿ ರೈಲು ನಿಲ್ದಾಣವನ್ನು ಆಧುನೀಕರಣಗೊಳಿಸಲು ಒತ್ತು ನೀಡಲಾಗಿದೆ, ರಾಮನಗರ ಹಾಗೂ ಬಿಡದಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಈ ಎರಡು ಪ್ರದೇಶಗಳ ಅಭಿವೃದ್ಧಿಗೊಳಿಸಲು ಆದ್ಯತೆ ನೀಡಲಾಗಿದೆ, ರಾಮನಗರ ಹೇಗೆ ಅಭಿವೃದ್ಧಿ ಹೊಂದುತ್ತಿದೆಯೋ ಅದೇ ರೀತಿ ಬಿಡದಿಯನ್ನು ಸಹ ಅಭಿವೃದ್ಧಿಗೊಳಿಸಬೇಕೆಂಬ ಆಶಯ ನಮ್ಮದು, ಅದಕ್ಕಾಗಿ ಅಧಿಕಾರಿಗಳೊಂದಿಗೆ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲಾಗಿದೆ, ಬಿಡದಿ ರೈಲು ನಿಲ್ದಾಣದಲ್ಲಿ ಮೂಲ ಸೌಕರ್ಯ ಒದಗಿಸಿದರೆ ಬೆಂಗಳೂರಿನ ಒತ್ತಡ ಕಡಿಮೆಯಾಗುತ್ತದೆ ಎಂದರು.

ಬೆಂಗಳೂರಿನಲ್ಲಿ ರೈಲುಗಳನ್ನು ನಿಲ್ಲಿಸಲು ಸ್ಥಳವಿಲ್ಲ. 24 ಗಂಟೆಗಳ ಕಾಲ ಒಂದು ರೈಲು ಪ್ರಯಾಣಿಸಿದರೆ ಅದನ್ನು ಸ್ವಚ್ಛಗೊಳಿಸಲು, ತಾಂತ್ರಿಕ ದೋಷಗಳನ್ನು ಪರಿಶೀಲಿಸುವ ವ್ಯವಸ್ಥೆಯನ್ನು ರೈಲು ಇಲಾಖೆ ಸುಮಾರು ವರ್ಷಗಳಿಂದ ಮಾಡುತ್ತಿರುವುದರಿಂದ ಈ ಭಾಗಗಳಲ್ಲಿ ಕಹಿ ಘಟನೆಗಳಾಗುತ್ತಿಲ್ಲ. ಅದಕ್ಕಾಗಿ ಜಾಗಗಳನ್ನು ಗುರುತಿಸಲಾಗುತ್ತಿದೆ ಎಂದು ಹೇಳಿದರು.

ಬೆಂಗಳೂರು ಸುತ್ತಮುತ್ತ 101 ಎಲ್‌ಸಿ ಗೇಟ್‌ಗಳ ಮೇಲ್ಸೇತುವೆಗಳನ್ನು ನಿರ್ಮಿಸಲು ಸ್ಥಳ ಗುರುತಿಸಿ, ಏಕಕಾಲದಲ್ಲೆ ನಿರ್ಮಿಸುವಂತೆ ಕೇಂದ್ರ ಸರ್ಕಾರದ ಸೂಚನೆಯಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರದ ಸಚಿವರು, ಶಾಸಕರು, ಅಧಿಕಾರಿಗಳೊಂದಿಗೆ ಚರ್ಚಿಸಿ ಯೋಜನೆ ರೂಪಿಸಲಾಗುವುದು.

ಎಲ್ಲಾ ರೈಲುಗಳನ್ನು ಜಿಲ್ಲಾ ಕೇಂದ್ರದಲ್ಲಿ ನಿಲ್ಲಿಸಬೇಕೆಂಬುದು ಜನರ ಒತ್ತಾಯವಾಗಿದೆ. ಸ್ಥಳೀಯ ಸಂಸದರು, ಶಾಸಕರು ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಜನಸಂದಣಿ ಹಾಗೂ ಬೆಂಗಳೂರಿನ ಒತ್ತಡ ಕಡಿಮೆ ಮಾಡಲು ರೈಲುಗಳನ್ನು ನಿಲ್ಲಿಸಲು ಸೂಚಿಸಲಾಗುವುದು. ಅವಶ್ಯಕತೆವಿರುವ ಕಡೆಗಳಲ್ಲಿ ಶೀಘ್ರದಲ್ಲೇ ಸ್ಕೈ ವಾಲ್ಕ್‌ಗಳನ್ನು ನಿರ್ಮಿಸಲು ಇಂದೇ ಆದೇಶ ಹೊರಡಿಸಲಾಗುವುದು. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸಣ್ಣಪುಟ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲಾಗಿದೆ. ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣವು ಎಷ್ಟು ಮುಖ್ಯವೋ ಬಿಡದಿ ರೈಲು ನಿಲ್ದಾಣ ಅಷ್ಟೇ ಮುಖ್ಯವಾಗಿದೆ. ಇದನ್ನು ಮೇಲ್ದರ್ಜೆಗೇರಿಸಲು ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಹೆಜ್ಜಾಲದಿಂದ ಚಾಮರಾಜನಗರಕ್ಕೆ 142 ಕಿ.ಮೀ, ಹೆಜ್ಜಾಲದಿಂದ ಕಗ್ಗಲೀಪುರ, ಹಾರೋಹಳ್ಳಿ, ಮರಳವಾಡಿ, ಕನಕಪುರ, ಹಲಗೂರು, ಮಳವಳ್ಳಿ, ಕೊಳ್ಳೇಗಾಲ, ಯಳಂದೂರು, ಚಾಮರಾಜನಗರದವರೆಗೆ ಸುಮಾರು 8 ರಿಂದ 9 ನಿಲ್ದಾಣಗಳು ಬರುತ್ತದೆ. ರಾಜ್ಯದ ಸಚಿವರು ಹಾಗೂ ಸ್ಥಳೀಯ ಶಾಸಕರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಜಾಗ ನೀಡಿದರೆ ಈ ಮಾರ್ಗದಲ್ಲಿ ರೈಲುಗಳನ್ನು ಪ್ರಾರಂಭಿಸಲು ಯೋಜನೆ ರೂಪಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಸಿ. ಬಾಲಕೃಷ್ಣ, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ನೈರುತ್ಯ ರೇಲ್ವೆಯ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಪರಿಕ್ಷಿತ್ ಮೋಹಲ್ ಪೂರ್ಯ, ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಾಣೇಶ್ ಕೌಲಗಿ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಕೃಷ್ಣ ಚೈತನ್ಯ, ಉಪ ಮುಖ್ಯ ಯೋಜನಾಧಿಕಾರಿ (ಗತಿಶಕ್ತಿ) ಶುಭಂ ಶರ್ಮ, ಹಿರಿಯ ವಿಭಾಗೀಯ ಇಂಜಿನಿಯರ್ ರಾಜೀವ್ ಶರ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹೊಲೊಗ್ರಾಮ್ ಸ್ಟಿಕ್ಕರ್ ಸರಬರಾಜು ಸ್ಥಗಿತ: 400ಕ್ಕೂ ಹೆಚ್ಚು ಮಾಲಿನ್ಯ ಪರೀಕ್ಷಾ ಕೇಂದ್ರಗಳು ಬಂದ್!



**ಬೆಂಗಳೂರು:** ಸಾರಿಗೆ ಇಲಾಖೆಯು ಸುಮಾರು ಒಂದು ತಿಂಗಳಿನಿಂದ ಹೊಲೊಗ್ರಾಮ್ ಸ್ಟಿಕ್ಕರ್‌ಗಳನ್ನು ಪೂರೈಸಲು ವಿಫಲವಾದ ನಂತರ ರಾಜ್ಯಾದ್ಯಂತ 400 ಕ್ಕೂ ಹೆಚ್ಚು ಮಾಲಿನ್ಯ ಪರಿಶೀಲನಾ ಕೇಂದ್ರಗಳು ಮುಚ್ಚಲ್ಪಟ್ಟಿವೆ.

ಹೀಗಾಗಿ ವಾಹನ ಮಾಲಿನ್ಯ ಪರಿಶೀಲನೆ ವ್ಯವಸ್ಥೆಯು ಬಹುತೇಕ ಕುಸಿದಿದೆ. ಮುಚ್ಚಿದ ಕೇಂದ್ರಗಳಲ್ಲಿ ಹೆಚ್ಚಿನವು ಪೆಟ್ರೋಲ್ ಬಂಕ್‌ಗಳಿಗೆ ಸಂಬಂಧಿಸಿವೆ, ಇದು ದಿನನಿತ್ಯದ ಮಾಲಿನ್ಯ ಹೊರಸೂಸುವಿಕೆ ಪರೀಕ್ಷೆಯನ್ನು ದುರ್ಬಲಗೊಳಿಸುತ್ತದ. ಸಾವಿರಾರು ವಾಹನ ಚಾಲಕರು ಮಾನ್ಯ ಪ್ರಮಾಣಪತ್ರಗಳಿಲ್ಲದೆ ಸಿಲುಕಿ ದಂಡ ಪಾವತಿಸಬೇಕಾಗುತ್ತದೆ. ಕಳೆದ ಎಂಟು ದಿನಗಳಿಂದ ನಾವು ಶಟರ್‌ಗಳನ್ನು ಮುಚ್ಚಬೇಕಾಯಿತು ಎಂದು ಕರ್ನಾಟಕ ರಾಜ್ಯ ಪೆಟ್ರೋಲಿಯಂ ಡೀಲರ್‌ಗಳ ಸಂಘದ ಮಾಜಿ ಅಧ್ಯಕ್ಷ ಬಿ.ಆರ್. ರವೀಂದ್ರನಾಥ್ ಹೇಳಿದರು. ರಾಜ್ಯದಲ್ಲಿರುವ 2600 ಪಿ.ಯು.ಸಿ ಕೇಂದ್ರಗಳಲ್ಲಿ, ಹೆಚ್ಚಿನವು ಈಗ ಕಾರ್ಯನಿರ್ವಹಿಸುತ್ತಿಲ್ಲ. ಹೊಲೊಗ್ರಾಮ್ ಸ್ಟಿಕ್ಕರ್‌ಗಳಿಲ್ಲದೆ, ಪ್ರಮಾಣಪತ್ರಗಳನ್ನು ನೀಡಲಾಗುವುದಿಲ್ಲ ಎಂದಿದ್ದಾರೆ.

ಭದ್ರತಾ ಹೊಲೊಗ್ರಾಮ್‌ಗಳ ಖರೀದಿ ಮತ್ತು ವಿತರಣೆಯಲ್ಲಿನ ವಿಳಂಬದಿಂದಾಗಿ ಬಿಕ್ಕಟ್ಟು ಉಂಟಾಗಿದೆ, ಇದು ನಕಲಿಯನ್ನು ತಡೆಗಟ್ಟಲು ಕಡ್ಡಾಯ ಅವಶ್ಯಕತೆಯಾಗಿದೆ. ಮಾಲಿನ್ಯ ಪರಿಶೀಲನಾ ಕೇಂದ್ರಗಳು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ, ವಾಹನ ಮಾಲೀಕರು ಕಾನೂನನ್ನು ಪಾಲಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಈ ಬಿಕ್ಕಟ್ಟು ಸಾರಿಗೆ ಇಲಾಖೆಯೊಳಗಿನ ಆಡಳಿತಾತ್ಮಕ ಅಡಚಣೆ ಮತ್ತು ಕಳಪೆ ಸಮನ್ವಯವನ್ನು ಬಹಿರಂಗಪಡಿಸುತ್ತದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾವು ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಆದರೆ ಅವರು ಒಂದಲ್ಲ ಒಂದು ಕಾರಣವನ್ನು ಉಲ್ಲೇಖಿಸಿ ಸುಮಾರು ಎರಡು ತಿಂಗಳಿನಿಂದ ಅದನ್ನು ತೆರವುಗೊಳಿಸಿಲ್ಲ. ಈಗ ಅವರು ಅದನ್ನು ಹಣಕಾಸು ಇಲಾಖೆಗೆ ಕಳುಹಿಸಿದ್ದಾರೆ. ಅಲ್ಲಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಸುಮಾರು ಒಂದು ತಿಂಗಳಿನಿಂದ ನಾವು ತುರ್ತು ಕ್ರಮವಾಗಿ 5 ಲಕ್ಷ ಹೊಲೊಗ್ರಾಮ್ ಸ್ಟಿಕ್ಕರ್‌ಗಳನ್ನು ವಿತರಿಸಿದ್ದೇವೆ ಆದರೆ ಈಗ ನಾವು ಅದನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದಿದ್ದಾರೆ,


ಕೆಲವು ನಿರ್ಲಜ್ಜ ವ್ಯಕ್ತಿಗಳು ನಕಲಿ ಹೊಲೊಗ್ರಾಮ್‌ಗಳನ್ನು ಬಳಸಿ ಎಮಿಶನ್ ಟೆಸ್ಟ್ ಕೇಂದ್ರಗಳನ್ನು ನಡೆಸುತ್ತಿದ್ದಾರೆ ಎಂಬ ದೂರುಗಳು ಬಂದಿವೆ. ಆದರೆ ಈ ಸಂಬಂಧ ಪ್ರತಿಕ್ರಿಯಿಸಲು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಲಭ್ಯವಿರಲಿಲ್ಲ. ಪರಿಹಾರಕ್ಕೆ ಸ್ಪಷ್ಟ ಸಮಯವಿಲ್ಲದ ಕಾರಣ, ಸರಬರಾಜು ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತಿದೆ.

# ಮಹಾರಾಷ್ಟ್ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ 5 ಜೆಡಿಎಸ್ ಅಭ್ಯರ್ಥಿಗಳ ಗೆಲುವು

**ಬೆಂಗಳೂರು:** ಮಹಾರಾಷ್ಟ್ರದಲ್ಲಿ ನಡೆದಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್‌ನ ಐವರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು ಇದಕ್ಕೆ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರು ಸಂತಸ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮಹಾರಾಷ್ಟ್ರದ ಜೆಡಿಎಸ್ ರಾಜ್ಯಾಧ್ಯಕ್ಷ ಶ್ರೀನಾಥ ಹರಿಬಾಹು ಶೇವಾಲೆಗೆ ಪತ್ರ ಬರೆದಿರುವ ಗೌಡರು ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ತಮ್ಮ ಪಕ್ಷದಿಂದ ಆಯ್ಕೆಯಾಗಿರುವ ಐದು ಮಂದಿ ಕೌನ್ಸಿಲರ್‌ಗಳನ್ನು ಅಭಿನಂದಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಪಕ್ಷ ಬಲಗೊಳ್ಳುತ್ತಿರುವುದರ ಸೂಚನೆ ಇದಾಗಿದೆ. ಈ ಗೆಲುವು ಒಂದು ಮೈಲಿಗಲ್ಲಾಗಿದೆ. ಮುಂಬರುವ ಬೃಹತ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆ ಹಾಗೂ ಭವಿಷ್ಯದ ಚುನಾವಣೆಗಳಲ್ಲಿ ಇನ್ನೂ ಹೆಚ್ಚಿನ ಸ್ಥಾನಗಳನ್ನು ಜೆಡಿಎಸ್ ಗಳಿಸುವ ವಿಶ್ವಾಸವಿದೆ ಎಂದು ಗೌಡರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

# ಮೂಲಂಗಿಯಿಂದ ಮೂಗು ಮುರಿಯದಿರಿ

## ಆರೋಗ್ಯ ಭಾಗ್ಯ



ಬಾಯಿಗೆ ಯಾವುದು ರುಚಿಯಾಗಿರುವುದಿಲ್ಲವೋ, ಅದು ಎಂದಿಗೂ ಆರೋಗ್ಯಕ್ಕೆ ಉತ್ತಮವಾಗಿರುತ್ತದೆ. ಬಾಯಿಗೆ ರುಚಿ ಎನಿಸುವ ಆಹಾರಗಳು ಆರೋಗ್ಯಕ್ಕೆ ಹಾನಿಕಾರಕವೇ ಹೆಚ್ಚು. ಅದೇ ಸಾಲಿಗೆ ಸೇರುತ್ತೆ ಈ ಮೂಲಂಗಿ.

ಮೂಲಂಗಿ ಅಂದರೆ, ಮೂಗು ಮುರಿಯುವವರೇ ಹೆಚ್ಚು. ಅದರ ರುಚಿ ಹಾಗೂ ವಾಸನೆಯಿಂದ ಅತೀ ಕಡಿಮೆ ಜನರ ಫೇವರೆಟ್ ಆಗಿದೆ ಈ ಮೂಲಂಗಿ. ಆದರೆ, ಇದರಲ್ಲಿರುವ ಪೋಷಕಾಂಶಗಳು, ಅದು ದೇಹಕ್ಕೆ ನೀಡುವ ಪ್ರಯೋಜನಗಳ ಬಗ್ಗೆ ನೀವು ಕೇಳಿದರೆ, ಅಚ್ಚರಿ ಪಡುವುದರಲ್ಲಿ ಯಾವುದೇ ಸಂದೇಹವಿಲ್ಲ.

ಮೂಲಂಗಿಯಲ್ಲಿರುವ ಪೋಷಕಾಂಶಗಳು: ಚಳಿಗಾಲದಲ್ಲಿ ಬಿಳಿ ಮೂಲಂಗಿ ಆಹಾರದ ರುಚಿಯನ್ನು ಹೆಚ್ಚಿಸುವುದಲ್ಲದೆ, ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುತ್ತದೆ. ಮೂಲಂಗಿಯನ್ನು ಸಲಾಡ್‌ಗಳಲ್ಲಿ ಮತ್ತು ತರಕಾರಿಯಾಗಿ ಬಳಸಲಾಗುತ್ತದೆ. ಇದರಲ್ಲಿ ಪ್ರೋಟೀನ್, ವಿಟಮಿನ್–ಎ, ವಿಟಮಿನ್–ಬಿ, ಸಿ, ಕಬ್ಬಿಣ, ಅಯೋಡಿನ್, ಕ್ಯಾಲ್ಸಿಯಂ, ಸಲ್ಫರ್, ಸೋಡಿಯಂ, ಮೆಗ್ನಿಸಿಯಮ್, ರಂಜಕ ಮತ್ತು ಕ್ಲೋರಿನ್ ಸಮೃದ್ಧವಾಗಿದೆ. ಮೂಲಂಗಿಯಲ್ಲಿ ವಿಟಮಿನ್ ಎ, ಸಿ, ಬಿ6, ಪೊಟ್ಯಾಸಿಯಮ್ ಮತ್ತು ಇತರ ಖನಿಜಗಳಿವೆ, ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯವಾಗುವ ಅಂಶಗಳಾಗಿವೆ.ಇವೆಲ್ಲವೂ ಆರೋಗ್ಯಕ್ಕೆ ಬಹಳ ಮುಖ್ಯವಾಗಿದೆ.

ಚಳಿಗಾಲದಲ್ಲಿ ಮೂಲಂಗಿ ಸೇವನೆಯಿಂದ ಸಿಗುವ ಪ್ರಯೋಜನಗಳು:

ಪೋಷಕಾಂಶಗಳಿಂದ ಸಮೃದ್ಧವಾಗಿರುವ ಮೂಲಂಗಿಯನ್ನು ಸೇವಿಸುವುದರಿಂದ ಅನೇಕ ಆರೋಗ್ಯ ಪ್ರಯೋಜನಗಳಿವೆ. ಅದರಲ್ಲೂ ಚಳಿಗಾಲದಲ್ಲಿ ಇದರ ಸೇವನೆ ದೇಹವನ್ನು ಬೆಚ್ಚಗಿಡುತ್ತದೆ. ಇದೇ ರೀತಿ ಚಳಿಗಾಲದಲ್ಲಿ ಮೂಲಂಗಿ ಯಾವ ರೋಗಗಳಿಗೆ ಚಿಕಿತ್ಸೆ ನೀಡುತ್ತದೆ ಎಂಬುದನ್ನು ಇಲ್ಲಿ ತಿಳಿಯೋಣ.

ಮೂಲಂಗಿ ರಕ್ತ ಪರಿಚಲನೆಯನ್ನು ಉತ್ತಮಗೊಳಿಸಲು ನೆರವಾಗುವ ನೈಸರ್ಗಿಕ ನೈಟ್ರೇಟ್‌ಗಳ ಉತ್ತಮ ಮೂಲವಾಗಿದೆ. ಜೊತೆಗೆ ಮೂಲಂಗಿಯಲ್ಲಿ ಉತ್ತಮ ಪ್ರಮಾಣದ ಕೊಲ್ಯಾಜೆನ್ ಎಂಬ ಪೋಷಕಾಂಶವಿದೆ. ಇದು ರಕ್ತನಾಳಗಳನ್ನು ಬಲಪಡಿಸಲು ನೆರವಾಗುತ್ತದೆ.

ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು ಚಳಿಗಾಲದಲ್ಲಿ ಮೂಲಂಗಿಯನ್ನು ಸೇವಿಸುವುದು ಪ್ರಯೋಜನಕಾರಿಯಾಗಿದೆ. ಚಳಿಗಾಲದಲ್ಲಿ ನೆಗಡಿ ಮತ್ತು ಕೆಮ್ಮಿನ ಸಮಸ್ಯೆಯನ್ನು ಹೋಗಲಾಡಿಸಲು ಮೂಲಂಗಿ ಅತ್ಯುತ್ತಮ ಔಷಧಿಯಾಗಿದೆ. ಮೂಲಂಗಿಯಲ್ಲಿ ಶೀತವನ್ನು ತಡೆಯುವ ಗುಣವಿದ್ದು, ಇದು ಕೆಮ್ಮಿನ ಸಮಸ್ಯೆಯನ್ನು ನಿವಾರಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರನ್ನು ಕಾಡುವ ಸಮಸ್ಯೆ ಈ ಅಸಿಡಿಟಿ. ನೀವು ಅಸಿಡಿಟಿಯಿಂದ ತೊಂದರೆಗೊಳಗಾಗಿದ್ದರೆ, ಹಸಿ ಮೂಲಂಗಿಯನ್ನು ಸೇವಿಸಿ. ಹಸಿ ಮೂಲಂಗಿಯಲ್ಲಿ ನಾರಿನಂಶ ಹೆಚ್ಚಿದ್ದು, ಇದು ಅಸಿಡಿಟಿ ಹೋಗಲಾಡಿಸಲು ಸಹಕಾರಿ.



1 ರಿಂದ 2 ಮೂಲಂಗಿ ಬೇರುಗಳನ್ನು ಕತ್ತರಿಸಿ ನಂತರ ಅದಕ್ಕೆ 3 ರಿಂದ 4 ಗ್ಲಾಸ್ ಅಷ್ಟು ನೀರನ್ನು ಸೇರಿಸಿ ಈ ಮಿಶ್ರಣವನ್ನು 1 ರಿಂದ 2 ಗಂಟೆ ಗಳ ಕಾಲ ನೆನೆಯಲು ಬಿಡಿ ನಂತರ ದಿನಪೂರ್ತಿ ಈ ಮಿಶ್ರಣವನ್ನ ಕುಡಿಯುವುದರಿಂದ ದೇಹದ ತೂಕ ಕಡಿಮೆ ಮಾಡಲು ಸಹಕಾರಿಯಾಗುತ್ತದೆ.

ಅರ್ಧ ಲೋಟದಷ್ಟು ಮೂಲಂಗಿ ರಸ ಹಾಗೂ ಅಷ್ಟೇ ಪ್ರಮಾಣದ ನೀರು ಹಾಗೂ ಅದಕ್ಕೆ ಸ್ವಲ್ಪ ನಿಂಬೆ ರಸವನ್ನು ಸೇರಿಸಿ ಸೇವಿಸಿ ನಂತರ ಈ ಮಿಶ್ರಣವನ್ನು ಊಟದ ಮೊದಲು ಕುಡಿಯಿರಿ ಇದರಿಂದಾಗಿ ನಿಮ್ಮ ದೇಹದಲ್ಲಿರುವ ಕೆಟ್ಟ ಕೊಬ್ಬನ್ನು ನಿಧಾನವಾಗಿ ನಿವಾರಣೆ ಮಾಡುತ್ತದೆ.

ಮೂಲಂಗಿ ಎಲೆಗಳನ್ನು ಬೇರ್ಪಡಿಸಿ ಅದನ್ನು ರುಬ್ಬಿ ನಂತರ ದೊರೆತ ಪಾನಿಯವನ್ನು 40–50 ಮಿಲಿಯಷ್ಟು ತೆಗೆದುಕೊಂಡು ದಿನಕ್ಕೆ ಎರಡು ಬಾರಿ ಕುಡಿಯುವುದರಿಂದ ಕಣ್ಣಿನ ತೊಂದರೆ ಕಣ್ಣಿನ ಉರಿಯೂತ ಇರುಳು ಕುರುಡು ಮುಂತಾದ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು.

ಒಂದರಿಂದ ಎರಡು ಮೂಲಂಗಿಯ ಬೇರುಗಳನ್ನು ತೆಗೆದುಕೊಂಡು ಅದನ್ನು ರುಬ್ಬಿಕೊಳ್ಳಿ ರುಬ್ಬಿದ ಮಿಶ್ರಣವನ್ನು ಚರ್ಮ ಮತ್ತು ಮುಖದ ಮೇಲೆ ಹಚ್ಚಿಕೊಳ್ಳಿ 15–20 ನಿಮಿಷ ಹಾಗೇ ಬಿಟ್ಟು ನಂತರ ಮುಖ ತೊಳೆದುಕೊಂಡು ಹೀಗೆ ಮಾಡುವುದರಿಂದ ಮುಖ ಹಾಗೂ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ.

ರಕ್ತದ ಒತ್ತಡ ಕಡಿಮೆಯಾದರೂ ತೊಂದರೆ, ಹೆಚ್ಚಾದರೂ ತೊಂದರೆ. ಬಿಳಿ ಮೂಲಂಗಿಯಲ್ಲಿರುವ ಪೊಟ್ಯಾಶಿಯಂ ಮತ್ತು ಇತರ ಪೋಷಕಾಂಶಗಳು ರಕ್ತದ ಒತ್ತಡವನ್ನು ಆರೋಗ್ಯಕರ ಮಿತಿಯಲ್ಲಿರಿಸಲು ನೆರವಾಗುವ ಕಾರಣದಿಂದಲೇ ರಕ್ತದ ಒತ್ತಡಕ್ಕೆ ಅತ್ಯುತ್ತಮ ಆಹಾರ ಎಂಬ ಅನ್ವರ್ಥನಾಮವನ್ನು ಪಡೆದಿದೆ.

ಸಾಮಾನ್ಯ ಶೀತ, ಜ್ವರ, ಕೆಮ್ಮು ಮೊದಲಾದ ವೈರಸ್ಸುಗಳ ಮೂಲಕ ಎದುರಾಗುವ ಸೋಂಕುಗಳು ಎದುರಾಗದಂತೆ ರಕ್ಷಿಸುತ್ತದೆ. ಅಲ್ಲದೇ ಬಾವು ಮತ್ತು ಉರಿಯೂತ ಎದುರಾಗಿದ್ದರೆ ಮೂಲಂಗಿಯ ಸೇವನೆಯಿಂದ ಶೀಘ್ರವೇ ಗುಣವಾಗುತ್ತದೆ.

ಮೂಲಂಗಿಯನ್ನು ನಿತ್ಯದ ಆಹಾರದಲ್ಲಿ ಸಾಲಾಡ್ ರೂಪದಲ್ಲಿ ಸೇವಿಸುತ್ತಾ ಬರುವ ಮೂಲಕ ಜೀರ್ಣಾಂಗಗಳು ಉತ್ತಮವಾದ ಆರೋಗ್ಯದಲ್ಲಿರುತ್ತವೆ. ಆಮ್ಲೀಯತೆ, ಸ್ಥೂಲಕಾಯ, ಗ್ಯಾಸ್ಟ್ರಿಕ್ ತೊಂದರೆಗಳು, ವಾಕರಿಕೆ ಮೊದಲಾದ ತೊಂದರೆಗಳು ಎದುರಾಗುವ ಸಾಧ್ಯತೆ ಅಪಾರವಾಗಿ ಕಡಿಮೆಯಾಗುತ್ತದೆ.



ಪೈಲ್ಸ್ ಸಮಸ್ಯೆ ಇರುವವರಿಗೆ ವೈದ್ಯರು ಸಾಮಾನ್ಯವಾಗಿ ಹಸಿ ಮೂಲಂಗಿ ಸೇವಿಸಲು ಹೇಳುತ್ತಾರೆ. ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಫೈಬರ್ ಅಂಶವಿದೆ. ಅಂದರೆ ಜೀರ್ಣವಾಗದ ಕಾರ್ಬೋಹೈಡ್ರೇಟ್‌ಗಳಿಂದ ಕೂಡಿದೆ. ಹಾಗಾಗಿ ಉತ್ತಮ ನಿರ್ವಿಶೀಕರಣದ ಗುಣವಿರುವುದರಿಂದ ಪೈಲ್ಸ್ ರೋಗಲಕ್ಷಣಗಳನ್ನು ತ್ವರಿತವಾಗಿ ಪರಿಹರಿಸಲು ಸಹಾಯ ಮಾಡುತ್ತದೆ. ಇದನ್ನು ಜ್ಯೂಸ್ ಮಾಡಿ ಕುಡಿಯುವುದರಿಂದ ಜೀರ್ಣ ಕ್ರಿಯೆ ಮತ್ತು ವಿಸರ್ಜನಾ ವ್ಯವಸ್ಥೆಯನ್ನು ಸುಗಮಗೊಳಿಸುತ್ತದೆ ಹಾಗೂ ಕ್ರಮೇಣ ಪೈಲ್ಸ್ ಸಮಸ್ಯೆಯನ್ನು ನಿವಾರಿಸುತ್ತದೆ.

ಮೂತ್ರವರ್ಧಕ, ಕ್ಲೀನರ್ ಮತ್ತು ನಂಜುನಿರೋಧಕವಾಗಿ, ಮೂಲಂಗಿಯು ಹಲವಾರು ಮೂತ್ರಪಿಂಡದ ಅಸ್ವಸ್ಥತೆಗಳ ಚಿಕಿತ್ಸೆಯಲ್ಲಿ ಸಹಾಯ ಮಾಡುತ್ತದೆ. ಇದರ ನಂಜುನಿರೋಧಕ ಗುಣಲಕ್ಷಣಗಳು ಮೂತ್ರಪಿಂಡಗಳನ್ನು ಯಾವುದೇ ಸೋಂಕುಗಳಿಂದ ರಕ್ಷಿಸುತ್ತದೆ.



ಮೂಲಂಗಿ ಸೊಪ್ಪಿನ ರಸವನ್ನು ಸೇವಿಸುವುದರಿಂದ ಮೂತ್ರವೂ ಕಟ್ಟಿಕೊಂಡಿದ್ದರೆ ಅದರ ಬಿಡುಗಡೆಯಾಗುತ್ತದೆ.

ಮೂಲಂಗಿ ಸೊಪ್ಪಿನ ಪಲ್ಯವನ್ನು ತಯಾರಿಸಬಹುದು, ಇದು ಚೆನ್ನಾಗಿರುತ್ತದೆ ಮತ್ತು ಆರೋಗ್ಯಕ್ಕೂ ಒಳ್ಳೆಯದು. ಆದರೆ ಚೆನ್ನಾಗಿರುವ ಸೊಪ್ಪನ್ನು ನೋಡಿ ತೆಗೆದುಕೊಳ್ಳಬೇಕು.

ಊಟದಲ್ಲಿ ಹಸಿಮೂಲಂಗಿಯನ್ನು ಸೇವಿಸುವುದರಿಂದ ಕಣ್ಣು,ಮೂಗು,ಕಿವಿ ಮತ್ತು ಗಂಟಲಿನ ಸಮಸ್ಯೆಗಳು ನಿವಾರಣೆಯಾಗುತ್ತವೆ. ಪ್ರತಿದಿನವೂ ಹಸಿಮೂಲಂಗಿಯನ್ನು ಬಳಸಿ, ಒಳ್ಳೆಯದು. ಹಸಿ ಮೂಲಂಗಿಯನ್ನು ತುರಿದು ಉಪ್ಪು ಮತ್ತು ನಿಂಬೆರಸ ಸೇರಿಸಿ ತಿಂದರೆ ನೆಗಡಿ ನಿವಾರಣೆಯಾಗುತ್ತದೆ. ಚೇಳು ಕುಟುಕಿದ ಜಾಗಕ್ಕೆ ಮೂಲಂಗಿ ಮತ್ತು ಉಪ್ಪನ್ನು ಅರೆದು ಹಚ್ಚಿದರೆ ವಿಷ ಏರುವುದಿಲ್ಲ ಮತ್ತು ಉರಿ ಕಮ್ಮಿಯಾಗುತ್ತದೆ.


ಮೂಲಂಗಿ ಸೇವನೆಯಿಂದ ಅದರಲ್ಲಿರುವ ವಿಟಮಿನ್ ಸಿ ನಮ್ಮ ದೇಹದಲ್ಲಿ ರಕ್ತಕಣಗಳನ್ನು ಹೆಚ್ಚಿಸುವುದಲ್ಲದೆ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅಷ್ಟೇ ಅಲ್ಲ ಇದು ಕ್ಯಾನ್ಸರ್ ಬರುವುದನ್ನೂ ತಡೆಯಬಲ್ಲದು. ಕೆಂಪು ರಕ್ತಕಣಗಳ ಬೆಳವಣಿಗೆ ಹಾಗೂ ಕಾಮಾಲೆ ರೋಗದ ಚಿಕಿತ್ಸೆಗೆ ಸಹಕಾರಿ. ಮೂಲಂಗಿಯ ಬೇರಿನ ಭಾಗ ಮಾತ್ರವಲ್ಲ, ಅದರ ಸೊಪ್ಪಿನ ಬಳಕೆ ಕೂಡ ಉಪಯುಕ್ತ.

ಮೂಲಂಗಿಯನ್ನು ಸಾರು, ಸಾಂಬಾರ್, ಪಲ್ಯ, ಬೇಯಿಸಿ ಪರೋಟ ಮಾಡುವ ಮೂಲಕ ಮೊದಲಾದ ಹಲವು ಬಗೆಯಲ್ಲಿ ಸೇವಿಸಬಹುದಾದರೂ ಹಸಿಯಾಗಿ ತಿನ್ನುವ ಮೂಲಕ ಗರಿಷ್ಠ ಪ್ರಯೋಜನವನ್ನು ಪಡೆಯಬಹುದು.



ಸೌಮ್ಯಸನತ್
ಶಿಕ್ಷಕರು

## ಪದಬಂಧ



### ಎಡದಿಂದ ಬಲಕ್ಕೆ.....

1. ಮೂರಕ್ಷರದ ಅವಶ್ಯಕತೆ ಇದು..... .(3)
3. ದಕ್ಷಿಣ ಕನ್ನಡದ ಪ್ರಸಿದ್ಧ ಭೂತಾರಾಧನೆ.....(2)
4. ಮದನನಿಗೇರಿದ ಸೊಕ್ಕು......(2)
5. ಕಣವಲ್ಲವಿದು ಪತ್ರಿಕೆಗಳಲ್ಲಿನ ವಿಶಿಷ್ಟ ಬರಹದ ಭಾಗ.....(3)
7. ಸಂಯಮದಿಂದ ಮಾಡಿದ ಶೇಖರಣೆ.......(3)
8. ರೋಗ ಗುಣವಾಗದೇ ಉಲ್ಬಣಿಸಿದ ಸ್ಥಿತಿ.....(2)
9. ಕಾಯುವಿಕೆಗೆ ಹೆಸರಾದ ಪಕ್ಷಿ......(2)
11. ಅನುಗುಣವಾದದ್ದರಲ್ಲಿ 'ರೂಪ'ವಿದೆ...... (4)
13. ಮೂರು ಕಾಲಿನ ಹೆರಳನ್ನು ಎರೆಡಕ್ಷರದಲ್ಲಿ ಹೀಗನ್ನಿ ......(2)
15. 'ರಾಜು' ಮಾಡಿದ 'ಲಿಲಾವು' .......(3)
16. ಇದು ರಸಮಯವಾದ ಸಾರು.....(2)
18. ಸಹಕರಿಸದೇ ತೋರುವ ಪ್ರತಿಭಟನೆ.......(5)
19. ಹೊಡಿ~ಬಡಿ ಅನ್ನುವುದನ್ನು ಹೀಗೂ ಹೇಳಬಹುದು.......(2)
21. ತೀರ ಕೆಳಮಟ್ಟದಲ್ಲಿರುವುದು ಕಷ್ಟವಾಗಿ ಕೊನೆಯಲ್ಲಿ ದೀರ್ಘವಾಗಿದೆ...... (3)
22. ಈ ಭಂಟ ತುಂಬ 'ತರಲೆ'......(2)
23. ಒಳ್ಳೆಯ ನಡತೆ, ಚಾರಿತ್ರ್ಯವುಳ್ಳವ......(4)
25. ಧರಿತ್ರಿಯನ್ನು ಹೀಗೆ ಕರೆಯಿರಿ.......(2)
26. ಇದು 'ಮೂಳೆ ಮಾಂಸದ ತಡಿಕೆ'......(2)
28. ತನನ ಹಾಡುತ್ತಿರುವ ಕಾಡು...... (3)
29. ದೃಢವಾದ ನಿಶ್ಚಯವಿದು.......(3)
31. ಹಾಲಾಹಲದಲ್ಲಿರುವ ಆಯುಧ.....(2)
32. ಇದಿಲ್ಲದಿದ್ದವನಿಗೆ ಸಂತೆಯಲ್ಲೂ ನಿದ್ದೆಯಂತೆ......(2)
33. ಭಯ ನೀಗಿ ದೇವರು ನೀಡುವ ರಕ್ಷೆ ......(3)

### ಮೇಲಿನಿಂದ ಕೆಳಕ್ಕೆ.....

1. ಅರಳಿದ ಪುಷ್ಪವನ್ನು ಹೀಗೆ ಕರೆಯಿರಿ......(3)
2. ಕೊನೆ ಇಲ್ಲಿ ಶೀರ್ಷಾಸನ ಹಾಕಿದೆ.......(2)
3. ಇದರ ಮುಂದೆ ಕಿನ್ನರಿ ಬಾರಿಸುವುದು ವ್ಯರ್ಥ.......(2)
4. ಇವನು ರಾಕ್ಷಸರ ಶಿಲ್ಪಿ....... (2)
6. 'ಬಾಗು'ವುದು ಆಂಗ್ಲದಲ್ಲಿ ಕರೆದಂತಿದೆ........(3)
7. ....... ಈ ಪದ ನಿಮ್ಮ ಆಯ್ಕೆ........ .....(5)
10. ಕೇಳಿದಾಗ ಬೇಡವೆಂದಿದ್ದು ಈ ಸಂಕೋಚದಿಂದ.....(2)
12. ಅಡಚಣೆಯನ್ನು ನಿವಾರಿಸಿದ್ದರಲ್ಲಿ ಹರಿ ಇದ್ದಾನೆ.....(5)
13. ಚೆಲ್ಲಾಪಿಲ್ಲಿಯಾದ ಹಡಗು........(3)
14. ಏರಿದ ದೇಹದ ಉಷ್ಣತೆಯನ್ನು ಹೀಗೆ ಕರೆಯಿರಿ.....(2)
17. ವೆಂಕಟರಮಣ ನೆನಪಾಗೋದು ಇದು ಬಂದಾಗಲೇ.......(3)
18. ಒಂದೇ ಸಮಯದಲ್ಲಿ ಎಂಟು ಬೇರೆ ವಿಷಯಗಳನ್ನು ಆಲಿಸಿ ಪರಿಹರಿಸುವ ಕಲೆ/ವಿದ್ಯೆ.....(5)
20. ತಲೆಕೆಳಗಾದ ಸಾಹುಕಾರ.......(2)
22. ಗಿಡದ ತುಂಬ ಅರಳಿದ್ದು ಈ ಪುಟ್ಟುಟ್ಟ ಹೂವು..(2)
24. ಮರಿ ಬಿದ್ದ ಕಂದಕ ಅಡಿಮೇಲಾಗಿದೆ...... (3)
27. ಹಯವೇರುವ ವಯಸ್ಸು.......(3)
28. ಕಾಲಕ್ರಮದಲ್ಲಿರುವ ಸಮಯ.......(2)
29. ಎರಡಕ್ಷರದ ಮಾರುಕಟ್ಟೆ.......(2)
30. ಬೆಲೆ ಇಲ್ಲದೇ ತುಚ್ಛವಾದದ್ದು ತಲೆಕೆಳಗಾಗಿದೆ.(2)



ಜ್ಯೋತಿ ರಾಜೇಶ್

# ಎರಡು ವರ್ಷದ ಸಿನಿಮಾ ಶ್ರಮವನ್ನು ಎರಡು ನಿಮಿಷದಲ್ಲೇ ಜಾಲಾಡುವ ವಿಕೃತ ವಿಮರ್ಶಕರು!

ಈ ದಿನ ಎರಡು ದೊಡ್ಡ ಬಜೆಟ್ ನ ಕನ್ನಡದ ದೊಡ್ಡ ಸ್ಟಾರ್ ಗಳ ಸಿನಿಮಾ ಬಿಡುಗಡೆಯಾಗಿವೆ. ಒಂದು ಕಿಚ್ಚ ಸುದೀಪ್ ಅಭಿನಯದ "ಮಾರ್ಕ್" ಆದರೆ ಮತ್ತೊಂದು ಶಿವಣ್ಣ, ಉಪೇಂದ್ರ, ರಾಜ್ ಬಿ ಶೆಟ್ಟಿ ಇರುವ ಮಲ್ಟಿ ಸ್ಟಾರರ್ ಸಿನಿಮಾ " 45 " . ಈ ಸಿನಿಮಾಗಳು ಬಿಡುಗಡೆಯಾಗಿ ಇನ್ನೂ ಅರ್ಧ ದಿನ ಕಳೆದಿಲ್ಲ. ಆಗಲೇ ಸಿನಿಮಾಗಳನ್ನು ಅಕ್ಷರಗಳ ಮೂಲಕ, ರಿವ್ಯೂ ಮೂಲಕ ಸೋಲಿಸುವ ದರಿದ್ರ ಮನಃಸ್ಥಿತಿಗಳು ಸೋಷಿಯಲ್ ಮೀಡಿಯಾಗಳಲ್ಲಿ ಚುರುಕಾಗಿ ಕಾರ್ಯೋನ್ಮುಖವಾಗಿವೆ. ಅಂಥವರಲ್ಲೊಬ್ಬ ಬುದ್ಧಿವಂತ ತನ್ನ ಫೇಸ್ ಬುಕ್ ಪೇಜಿನಲ್ಲಿ ಯಾವ ರೇಂಜಿಗೆ ನೆಗೆಟೀವ್ ಆಗಿ ಅನಲೈಸ್ ಮಾಡಿದ್ದಾರೆಂದರೆ..,

" ಇಂದು ಕ್ರಿಸ್‌ಮಸ್ ರಜೆ ಇದ್ದರೂ ಮಾರ್ಕ್ ಮತ್ತು 45 ಚಿತ್ರಗಳಿಗೆ ಒಳ್ಳೆಯ ಓಪನಿಂಗ್ ಸಿಕ್ಕಿಲ್ಲ, ಬುಕ್ ಮೈ ಷೋ ನಲ್ಲಿ ಬಹುತೇಕ ಸ್ಕ್ರೀನ್ ಗಳು ಇನ್ನೂ ಹಸಿರಿನಲ್ಲಿವೆ. ರಜಾದಿನವೇ ಹೀಗಾದರೆ ಇನ್ನು ನಾಳೆ ಇಷ್ಟೂ ಇರೋಲ್ಲ" ಎಂದು ಅಸಹನೆಯ ವಾಂತಿ ಮಾಡಿಕೊಂಡಿದ್ದಲ್ಲದೇ, ಹಿಂದಿಯ ದುರಂದರ್ ಸಿನಿಮಾ ಮೂರನೇ ವಾರದಲ್ಲೂ ಹೌಸ್ ಫುಲ್ ಷೋ ಕಾಣುತ್ತಿದೆ ಎಂದೂ ಸೇರಿಸಿ ತನ್ನ ಅತೀ ಬುದ್ಧಿವಂತಿಕೆಯ ದುರುದ್ದೇಶವನ್ನು, ಅನ್ಯಭಾಷೆ ಸಿನಿಮಾಗಳಿಗೆ ಕನ್ನಡವನ್ನು ಹೋಲಿಸಿ ಹೀಯಾಳಿಸುವ ಚಾಳಿಯನ್ನೂ ಅನಾವರಣ ಮಾಡಿಕೊಂಡಿದ್ದಾರೆ.

ಈತ ಹೇಳಿದ ಹಾಗೆ ಜನಕ್ಕೆ ಸ್ಟಾರ್ ಡಂ, ವಿವಾದ, ಬಿಲ್ಡಪ್ಪು ಯಾವುದೂ ಬೇಕಿಲ್ಲ ಆದರೆ ಒಳ್ಳೆಯ ಮನರಂಜನೆ ಬೇಕು... ಎಂಬ ಮಾತು ನಿಜ– ಒಪ್ಪೋಣ. ಆದರೆ ಸಿನಿಮಾ ಬಿಡುಗಡೆಯಾಗಿ ಅರ್ಧ ದಿನವೂ ಆಗಿರದ ಈ ಹೊತ್ತಲ್ಲಿ ಹೀಗೆ ಸಿನಿಮಾ ನೋಡದೆಯೇ ಅವಸರವಾಗಿ ನಿರಾಶಾದಾಯಕ ಎಂದು ನೆಗೆಟೀವ್ ರಿಪೋರ್ಟ್ ಕೊಡುವ ಉದ್ದೇಶವಾದರೂ ಏನು.?

ಸಿನಿಮಾ ನೋಡಿ ಆ ಬಗ್ಗೆ ಏನು ಬೇಕಾದರೂ ವಿಮರ್ಶೆ ಬರೆಯಲಿ. ! ಆದರೆ ಕನ್ನಡ ಸಿನಿಮಾಗಳು ಬಿಡುಗಡೆಯಾಗಿ ಕೆಲವೇ ಘಂಟೆಗಳಲ್ಲಿ ಬೆಂಗಳೂರಿನ ಬುಕ್‌ಮೈಷೋನಲ್ಲಿ ಮಲ್ಟಿಸ್ಕ್ರೀನ್‌ಗಳಲ್ಲಿ ಸೀಟುಗಳು ತುಂಬಿಲ್ಲ ( ಈತ ನೋಡಿದ ಸಮಯದಲ್ಲಿ ) ಎಂಬ ಒಂದು ಎಳೆಯನ್ನು ಹಿಡಿದು ಇದು






ನಿರಾಶಾದಾಯಕ ಓಪನಿಂಗು, ನಾಳೆ ಮುಗ್ಗರಿಸುವ ಸಾಧ್ಯತೆ ಇದೆ ಎಂದು ನೆಗೆಟೀವ್ ಶೇಡ್ ನಲ್ಲೇ ಇಷ್ಟು ಅವಸರದಲ್ಲಿ ರಿವ್ಯೂ ಕೊಡುವ ಮನೋಭಾವವನ್ನಷ್ಟೇ ಪ್ರಶ್ನಿಸುತ್ತಿದ್ದೇನೆ.

ಇಂತಹ ಅವಸರದ ಕಿಡಿಗೇಡಿಗಳಿಗೆ ಒಂದು ಕಿವಿಮಾತು. ಯಾವುದೇ ಒಂದು ಸಿನಿಮಾವನ್ನು ಗೆಲ್ಲಿಸುವುದು ಸೋಲಿಸುವುದು ದುಡ್ಡುಕೊಟ್ಟು ಥಿಯೇಟರ್ ಗೆ ಬಂದು ಸಿನಿಮಾ ನೋಡುವ ಪ್ರೇಕ್ಷಕ ಪ್ರಭು. ಒಂದು ಸಿನಿಮಾ ಜನಕ್ಕೆ ಇಷ್ಟ ಆದ್ರೆ ಗೆಲ್ಲಿಸ್ತಾರೆ, ಇಲ್ಲಾಂದ್ರೆ ಮಕಾಡೆ ಮಲಗಿಸ್ತಾರೆ. ಸಿಂಪಲ್ಲಾಗಿ ಹೇಳೋದಾದ್ರೆ ಯಾವುದೇ ಸಿನಿಮಾದ ಭವಿಷ್ಯ ಅನ್ನೋದು ಕಾಸು ಕೊಟ್ಟು ನೋಡೋ ಪ್ರೇಕ್ಷಕರ ಕೈಲಿದೆಯೇ ವಿನಃ ಸಿನಿಮಾ ನೋಡದೇ ಆಫೀಸಲ್ಲೋ, ರೂಮಲ್ಲೋ ಕೂತು ಕೈಯಲ್ಲಿ ಮೊಬೈಲು ಇದೆ ಎಂದು ಬಾಯಿಗೆ ಬಂದಂತೆ ರಿವ್ಯೂಗಳನ್ನು ಕುಟ್ಟೋ ಘನ ವಿದ್ವಾಂಸರ ಬರಹಗಳಲ್ಲಿ ಅಲ್ಲ.

ಆಯ್ತು....ಈ ಸಿನಿಮಾಗಳಿಗೆ ಬುಕ್ ಮೈ ಷೋನಲ್ಲಿ ಇವರು ನೋಡಿದ್ದ ಸಮಯಕ್ಕೆ ಸೀಟುಗಳ ಫಿಲ್ಲಿಂಗ್ ಹಸಿರಿನಲ್ಲೇ ಇತ್ತು ಎಂದುಕೊಳ್ಳೋಣ. ಅಂದ ಮಾತ್ರಕ್ಕೇ ಈ ರೇಂಜಿನ ನೆಗೆಟೀವ್ ಪ್ರಿಡಿಕ್ಷನ್ ರಿಪೋರ್ಟಾ...? ಕೇವಲ ಬೆಂಗಳೂರಿನ ಥಿಯೇಟರ್ ಗಳ ಬುಕ್‌ಮೈಷೋ ಗಳ ರಿಪೋರ್ಟ್ ಗಳಿಂದ ಮಾತ್ರವೇ ಎಲ್ಲ ಕನ್ನಡ ಸಿನಿಮಾಗಳ ಹಣೆಬರಹ ನಿಂತಿರೋದಾ...? ಹಾಗಾದ್ರೆ ಇಡೀ ಕರ್ನಾಟಕದ ಇತರೆ ಊರುಗಳಲ್ಲಿ ಸಿನಿಮಾ ನೋಡೋ ಜನ ಬುಕ್‌ಮೈ ಷೋನಲ್ಲಿಮಾತ್ರವೇ ಟಿಕೆಟ್ ಕೊಟ್ಟು ಸಿನಿಮಾ ನೋಡುತ್ತಾರಾ..? ಅಥವಾ ಈತ ನೋಡಿದ ಸಮಯಕ್ಕೆ ಜನ ಇನ್ನೂ ಬುಕ್ ಮಾಡಿಲ್ಲ ಅಂದರೆ ಅರ್ಥ ಅವರು ಸಿನಿಮಾ ನೋಡೋಲ್ಲಾ ಅಂತಾನಾ.?

ಎಂಥಾ ಲಾಜಿಕ್ಕು ಈ ಜನಗಳದ್ದು....? ವಿಪರ್ಯಾಸವೆಂದರೆ ಅನ್ಯ ಭಾಷೆಗಳ ಸಿನಿಮಾಗಳು ಅರ್ಥವಾಗದಿದ್ರೂ ಹಾಗೇ ಹೀಗೇ ಎಂಬ ಬಿಲ್ಡಪ್ ಕೊಟ್ಟು ಮೆರೆಸೋ ಕನ್ನಡದವರೇ ಆದ ಇಂಥಾ ಮೀಡಿಯಾ ಬುದ್ಧಿವಂತರು ಕನ್ನಡ ಸಿನಿಮಾಗಳಿಗೆ ನೆಗೆಟೀವ್ ರಿವ್ಯೂ ಕೊಡೋಕೆ ಅಂತಾನೇ ಡಿಸೈಡ್ ಮಾಡಿದ ಮೇಲೆ ಕೊಡಲಿ ಬಿಡಿ .! ಆದರೆ ಕೊನೇಪಕ್ಷ ಸಿನಿಮಾ ರಿಲೀಸ್ ಆಗಿ ಎರಡು ದಿನ ಕಾಯೋವರೆಗೂ ಇಂಥವರಲ್ಲಿ ಸಹನೆ ಇರೋಲ್ಲವಲ್ಲ ಅನ್ನೋದೇ ಬೇಜಾರು..! ಅದಾವ ದುರುದ್ದೇಶ ಇಟ್ಕೊಂಡು ಹೀಗೆಲ್ಲಾ ಕಾರುತ್ತಾರೋ ಗೊತ್ತಿಲ್ಲ.



ಹಿರಿಯೂರು ಪ್ರಕಾಶ್

ಕೋಟಿಕೋಟಿ ದುಡ್ಡು ಸುರಿದು ಎರಡು ಮೂರು ವರ್ಷ ಹಲವರ ಶ್ರಮದಿಂದ ನಿರ್ಮಿಸಿದ ಒಂದು ಸಿನಿಮಾದ ಬಾಕ್ಸ್ ಆಫೀಸ್ ಹಣೆಬರಹವನ್ನು ಸಿನಿಮಾ ಬಿಡುಗಡೆಯಾದ ಕೇವಲ ಹತ್ತಾರು ನಿಮಿಷಗಳಲ್ಲಿ ಸಿನಿಮಾ ನೋಡದೇ ನೆಗೆಟೀವ್ ಆಗಿ ಬರೆದು ಇಸುಬು ಕೆರೆದುಕೊಳ್ಳುವಂತಹ ವಿಕೃತ ಸಂತಸ ಅನುಭವಿಸುತ್ತಾ ಬಂದಿರುವ ಕೆಲವು " ಕ್ಯಾತೆ " ವಿಮರ್ಶಕರ ಇಂಥಾ ವಿಕೃತಿಗಳಿಗೆ ಪರಂಪರೆಯೇ ಇದೆ. ಆದರೆ ಇಂಥವರ ಸಿನಿಕತನದ ಅನಿಸಿಕೆಗಳಿಗೆ ಎಂದೂ ತಲೆಕೆಡಿಸಿಕೊಳ್ಳದ ಕನ್ನಡದ ಪ್ರೇಕ್ಷಕ, ಕೇವಲ ಸ್ಟಾರ್ ಸಿನಿಮಾ ಎಂಬಕಾರಣಕ್ಕೆ ಗೆಲ್ಲಿಸಿಯೂ ಇಲ್ಲ. ಆದರೆ ಒಂದು ಸದಭಿರುಚಿಯ ಸಿನಿಮಾವನ್ನು ಕನ್ನಡದ ಪ್ರೇಕ್ಷಕ ಎಂದೂ ಕೈಬಿಟ್ಟಿಲ್ಲ ಇಷ್ಟೆಲ್ಲಾ ಎಲ್ಲದರೂ ಹಾಳಾಗಿ ಹೋಗಲೀ ! ಆದರೆ ಹೀಗೆ ತಮ್ಮೆಲ್ಲಾ ಅಸಹನೆ ವಾಂತಿ ಮಾಡಿಕೊಳ್ಳುವ ಮಾಧ್ಯಮದಲ್ಲಿರುವ ಕೆಲವು ಅಕ್ಷರ ಪಂಡಿತರಿಗೆ ಕೊನೇಪಕ್ಷ ಕನ್ನಡ ಸಿನಿಮಾಗಳೆಂಬ ಕನಿಷ್ಠ ಪ್ರೀತಿ ನಾಲ್ಕುದಿನದ ಮಟ್ಟಿಗಾದ್ರೂ ಇಲ್ಲವಾಯಿತಲ್ಲವೆಂಬುದೇ ನೋವಿನ ಸಂಗತಿ..!

* ಮರೆಯುವ ಮುನ್ನ *

ಕೆಲವು ಹೀರೋಗಳ ಸಿನಿಮಾಗಳಿಗೆ ಒಳ್ಳೆಯ ರಿವ್ಯೂ ಬರಲಿ ಎಂದು ಹೇಗೆ ಕೆಲವು ಪೇಯ್ಡ್ ಬರಹಗಾರರು ಇರುತ್ತಾರೋ ಹಾಗೆಯೇ ಕೆಲವು ನಟರ ಸಿನಿಮಾಗಳನ್ನು ತುಳಿಯಲೆಂದೇ ಮತ್ತೇ ಕೆಲವು ಪೇಯ್ಡ್ ವಿಮರ್ಶಕರೂ ಇರುತ್ತಾರೆ. ಇತರೆ ಭಾಷೆ ಸಿನಿಮಾಗಳ ಕೆಟ್ಟ ಹೂಸುಗಳನ್ನೂ ಆಹ್ಲಾದಕರ ಪರಿಮಳದಂತೆ ಆಸ್ವಾದಿಸಿ ಮೆರೆಸುವ ಕೆಲ ವಿಕೃತ ವಿಮರ್ಶಕರ ಪಾಲಿಗೆ ಕನ್ನಡ ಸಿನಿಮಾಗಳೆಂದರೆ ಅದೇಕೆ ಇಷ್ಟು ಅಲರ್ಜಿಯೋ...!

ಆದರೆ ಇವರ ದುರುದ್ದೇಶಪೂರಿತ, ದುರ್ಗಂಧ ತುಂಬಿದ ರಿವ್ಯೂ ರಾಜಕೀಯಗಳಿಗೆ ಕನ್ನಡ ಸಿನಿಮಾಗಳು ಬಲಿಯಾಗಲು ಕನ್ನಡ ಪ್ರೇಕ್ಷಕ ಎಂದೂ ಬಿಟ್ಟಿಲ್ಲ. ಅವನಿಗೆ ಸಿನಿಮಾ ಇಷ್ಟ ಆದರೆ ಗೆಲ್ಲುತ್ತದೆ ಇಲ್ಲವೇ ಬೀಳುತ್ತದೆ. ಎಲ್ಲವೂ ಕಾಸುಕೊಟ್ಟು ಚಿತ್ರನೋಡುವ ನೋಡುಗನ ಕೈಲಿದೆ. ಆದರೆ ಒಂದು ಸಿನಿಮಾವನ್ನು ಗೆಲ್ಲಿಸುವ ಅಥವಾ ಸೋಲಿಸುವ ತಾಕತ್ತು ವಿಮರ್ಶೆ/ ರಿವ್ಯೂ ಮೂಲಕ ತಮ್ಮ ರಾಜಕೀಯ ವರಸೆ ತೋರಿಸುವ ಮೂರ್ಖರ ಕೈಯಲ್ಲಂತೂ ಇಲ್ಲ .

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,